ಬರುತ್ತದೆ. ತಮ್ಮ ಭಾವನೆಯ ಪ್ರಕಾರ ತನಿಖೆಗೆ ಆರ್ಡರ್ ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ತಮ್ಮ ಭಾವನೆಗಳನ್ನು ನಾವು ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ತಿಳಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಮೊದಲು ಸರಿಯಾಗಿ ಇರಲಿಲ್ಲ. ನಾವು ತನಿಖೆಯನ್ನು ಮಾಡಿಸುತ್ತೇವೆಂದು ಹೇಳಿದ್ದರು. ಆದರೆ ಈಗ ಅದನ್ನು ತಿದ್ದಿಕೊಂಡಿದ್ದಾರೆ. ಬಹಳ ಸಂತೋಷ. ಏಕೆಂದರೆ ಕೆ.ಪಿ.ಎಸ್.ಸಿ.ಗೆ ರಾಜ್ಯಾಂಗದತ್ತವಾದ ಕೆಲವು ಸ್ಥಾನಮಾನಗಳಿವೆ .....

ಅಧ್ಯಕ್ಷರು : ನೀವು ಪುನಃ ಪುನಃ ಹೀಗೆ ಎದ್ದುನಿಂತರೆ ನಾನು ಏನು ಹೇಳಲಿ.

ಶ್ರೀ ಸಿ. ಭೈರೇಗೌಡ : ನಾವು ತನಿಖೆ ಮಾಡಿಸುತ್ತೇವೆಂದು ಅವರು ಮೊದಲು ಹೇಳಿದ್ದುದು ಸರಿ ಇರಲಿಲ್ಲ. ಈಗ ಅದನ್ನು ಅವರು ಸರಿಪಡಿಸಿಕೊಂಡಿದ್ದಾರೆ. ಅದಕ್ಕೆ ಸಂತೋಷ.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಬೇಡಿಕೆಗಳ ಮೇಲಿನ ಮಂಡನೆ. ಚರ್ಚೆ ಮತ್ತು ಮತಕ್ಕೆ ಹಾಕುವುದು.

ಅಭಿಯಾಚನೆ ಕರ್ಮಾಂಕ : 56 - ಕ್ರಮಪಡಿಸಿದ ಮಾರುಕಟ್ಟೆಗಳು

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಖಾತೆ ಸಚಿವರು) ಕ್ರಮಪಡಿಸಿದ ಮಾರುಕಟ್ಟೆಗಳ ಮಂತ್ರಿಗಳ ಪರವಾಗಿ : ಮಾನ್ಯ ಅಧ್ಯಕ್ಷರೇ,

ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ - ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕ ರಾಜಸ್ವ ಖಾತೆಯಲ್ಲಿ 16,43,70,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುಗಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ : 35 : ಸಣ್ಣ ನೀರಾವರಿ :

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸಮಾಜ ''ಕಲ್ಯಾಣ ಖಾತೆ'' ಮಂತ್ರಿಗಳು ( ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

''ರಾಜ್ಯಪಾಲರ ಶಿಪಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 56, 29,50,000 ರೂ.ಗಳಿಗಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 57,31,39,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುಗಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.''

ಅಭಿಯಾಚನೆ ಸಂಖ್ಯೆ : 46 : ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತುಪಡಿಸಿ)

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಖಾತೆ ಮಂತ್ರಿಗಳು) :
''ಮಾನ್ಯ ಅಧ್ಯಕ್ಷರೇ : 'ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು) ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ173,82,98,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುಗಾನದಲ್ಲಿಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.''

ಅಭಿಯಾಚನೆ ಕ್ರಮಾಂಕ : 47 : ಕಟ್ಟಡಗಳು

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಖಾತೆ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ,
''ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಟ್ಟಡಗಳಿಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 12,50,55,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 111,13,60,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುಗಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ಕೋರುತ್ತೇನೆ.''

ಅಭಿಯಾಚನೆ ಕ್ರಮಾಂಕ 48 : ರಸ್ತೆಗಳು ಮತ್ತು ಸೇತುವೆಗಳು :

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಖಾತೆ ಮಂತ್ರಿಗಳು ) :
ಮಾನ್ಯ ಅಧ್ಯಕ್ಷರೇ,
''ಮಾನ್ಯ ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ155,05,63,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 91,63,50,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ಕೋರುತ್ತೇನೆ.''

ಅಭಿಯಾಚನೆ ಕ್ರಮಾಂಕ : 09 : ಜವಳಿ ಉದ್ಯಮ ಇತ್ಯಾದಿ :

ಶ್ರೀ ಹೆಚ್. ಕೆ. ಪಾಟೀಲ್ (ಜವಳಿ ಖಾತೆ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ,

'ಮಾನ್ಯ ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದ 'ಜವಳಿ ಉದ್ಯಮಗಳು ಇತ್ಯಾದಿ. ಸಂದಾಯ ಮಾಡುವಲ್ಲಿ ಬರುವಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 49,80,46,000

ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,39,07,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಕೋರುತ್ತೇನೆ.'

ಅಭಿಯಾಚನೆ ಕ್ರಮಾಂಕ : 27 : ಆರಕ್ಷಕ ಸೇವೆಗಳು :

ಶ್ರೀ ಕಾಗೋಡು ತಿಮ್ಮಪ್ಪ , ಸಮಾಜ ಕಲ್ಯಾಣ ಖಾತೆ ಮಂತ್ರಿಗಳು (ಗೃಹ ಖಾತೆ ಮಂತ್ರಿಗಳ ಪರವಾಗಿ ) : ಮಾನ್ಯ ಅಧ್ಯಕ್ಷರೇ,

'ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆರಕ್ಷಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 340,47,84,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಕೋರುತ್ತೇನೆ.'

ಅಭಿಯಾಚನೆ ಕ್ರಮಾಂಕ : 28 : ಬಂದೀಖಾನೆಗಳು, ಅಗ್ನೀಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ.

ಶ್ರೀ ಆರ್. ಬಿ. ಚೌಧುರಿ ( ಬಂದೀಖಾನೆ ಸಚಿವರು) : ಮಾನ್ಯ ಅಧ್ಯಕ್ಷರೇ,

'ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-95ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3127,49,000ರೂ. ಗಳಿಗಿಂತ ಮೀರದ ಮಾತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಕೋರುತ್ತೇನೆ.'

ಅಧ್ಯಕ್ಷರು : ಬೇಡಿಕೆಗಳನ್ನು ಮಂಡಿಸಲಾಯಿತು.

(ಮಾನ್ಯ ಉಪಾಧ್ಯಕ್ಷರಾದ ಅಂಜನಮೂರ್ತಿಯವರು ಅಧ್ಯಕ್ಷ ಪೀಠಿಕೆವನ್ನಲಂಕರಿಸಿದರು.)

*ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಅನುದಾನ ಪೂರಕ ಚರ್ಚೆಗಳನ್ನು ಪ್ರಾರಂಭಿಸುವುದಕ್ಕೆ ಮುನ್ನ ಕೆಲವು ನಿಯಮಗಳನ್ನು ನಾವು ನೋಡಬೇಕಾಗುತ್ತದೆ. ಏನೆಂದರೆ, ಈ ಸದನದ ಒಬ್ಬರಲ್ಲ ಒಬ್ಬರು ಸದಸ್ಯರು ಒಂದಲ್ಲೊಂದು ಸಮಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅಲ್ಲದೆ ತಮ್ಮದೇ ಆದಂಥ ವರದಿಗಳನ್ನೂ ಕೂಡ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆಯಾಯ ಸಮಿತಿಯಲ್ಲಿ ಪಾಲ್ಗೊಂಡ ಅಧ್ಯಕ್ಷರು ಮತ್ತು ಸದಸ್ಯರು ಈ ಚರ್ಚೆಯಲ್ಲಿ ಪಾಲ್ಗೊಳ್ಳಲು

ಯಾವುದೇ ರೀತಿಯ ಅಭ್ಯಂತರವೂ ಇಲ್ಲ ಎಂಬುದು ನನ್ನ ಅನಿಸಿಕೆ. ಇದರ ಬಗ್ಗೆ ತಮ್ಮಿಂದ ಒಂದು ಆದೇಶ ಬೇಕಾಗುತ್ತದೆ. ಮುಂದೆ ಇದು ಒಂದು ಶಾಶ್ವತವಾದ ವ್ಯವಸ್ಥೆಯಾದ್ದರಿಂದ ಇದಕ್ಕೆ ಒಂದು ಪರಿಪೂರ್ಣ ರೂಪದ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ವಿಷಯ ಸಮಿತಿಗಳ ಮೂಲಕ ಅನುದಾನಗಳ ಪೂರಕ ಬೇಡಿಕೆಗಳನ್ನು ಚರ್ಚೆ ಮಾಡುತ್ತೇವೆ. ಒಂದಲ್ಲೊಂದು ರೀತಿಯಲ್ಲಿ ಈ ಶಾಸನ ಸಭೆಯ ಎಲ್ಲಾ ಸದಸ್ಯರೂ ಪಾಲ್ಗೊಂಡಿದ್ದಾರೆ. ಇನ್ನು ಕೆಲವರು ಆ ಸಮಿತಿಯಲ್ಲಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಹಾಗೆ ಸಮಿತಿಗಳಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಕೆಲಸ ಮಾಡಿದವರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಏನಾದರೂ ಕಾನೂನಿನ ಬಾಧಕ ಇದೆಯೇ ಎಂಬುದನ್ನು ತಮ್ಮಿಂದ ಒಂದು ಆದೇಶವನ್ನು ಬಯಸುತ್ತೇನೆ. ಇದರ ಬಗ್ಗೆ ತಾವು ಒಂದು ಮಾತನ್ನು ಹೇಳಿದರೆ ಒಳ್ಳೆಯದು. ಸಾಮಾನ್ಯವಾಗಿ ಸರ್ಕಾರಕ್ಕೆ ನಾವು ಸಲ್ಲಿಸಿರತಕ್ಕ ಎಲ್ಲಾ ವರದಿಗಳೂ ಕೂಡ ಒಕ್ಕೊರಲಿನಿಂದ ಮಾಡಿರತಕ್ಕ ತೀರ್ಮಾನ ಎಲ್ಲೂ ಕೂಡ ಯಾವುದೇ ಸಮಿತಿಯಲ್ಲೂ ಕೂಡ ಬಹುಶಃ ಡಿಸೆಂಟ್ ನೋಟ ಇಲ್ಲವೆಂದು ನಾನು ಭಾವಿಸಿದ್ದೇನೆ. ಅದು ಇದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ನಾವು ಡಿಸೆಂಟ್ ಮಾಡಬೇಕಾಗುತ್ತದೆ. ಇದು ನಮಗಿರುವ ತೊಂದರೆ. ಈ ಕಾರಣದಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

*ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಚಂದ್ರೇಗೌಡರು ಏನು ವಿವರಣೆಯನ್ನು ತಮ್ಮಿಂದ ಕೇಳಿದ್ದಾರೆ. ಆ ಅನುಮಾನ ನನ್ನಲ್ಲೂ ಭಾದಿಸುತ್ತಿದೆ. ಏಕೆಂದರೆ, ನಾನು ಆರ್ಥಿಕ ಇಲಾಖೆಗ ಸಂಬಂಧಪಟ್ಟಂತೆ ವಿಷಯ ಸಮಿತಿಯಲ್ಲಿ ನಾನೂ ಸಹ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ತಾವು ವಿವರಣೆಯನ್ನು ಈಗಲೇ ಕೊಡುವುದಾದರೆ ಸಂತೋಷ. ನಾನು ಆ ವಿಚಾರವನ್ನೂ ಕೂಡ ಮಾತನಾಡಬೇಕಾಗುತ್ತದೆ. ಮಾತನಾಡಬಹದು ಎಂದು ನಾನೇ ಬಾವಿಸಿಕೊಂಡು ನಾನು ಆ ವಿಚಾರವನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಈ ಸಭೆಯಲ್ಲಿ ಒಂದು ಹೊಸ ಪರಂಪರೆ ಪ್ರಾರಂಭವಾಗುತ್ತಿದೆ. ಈ ಕರ್ನಾಟಕ ವಿಧಾನಸಭೆ ಪ್ರಾರಂಭವಾದಾಗಿನಿಂದ ನಿಯಮಾವಳಿ ಪ್ರಕಾರ ಈ ಬೇಡಿಕೆಗಳನ್ನು ಚರ್ಚೆ ಮಾಡಿ ಚರ್ಚೆ, ಉತ್ತರ ಮತ್ತು ಮತಕ್ಕೆ ಹಾಕತಕ್ಕ ಒಂದು ಪದ್ಧತಿ ಜಾರಿಯಲ್ಲಿತ್ತು. ಈ ಆರ್ಥಿಕ ವರ್ಷದಿಂದ ಆ ಪರಿಸ್ಥಿತಿ ಬದಲಾವಣೆಯಾಗಿ ವಿಷಯ ಸಮಿತಿಗಳನ್ನು ರಚನೆ ಮಾಡಿ ಅದರ ಮುಂದೆ ಈ ಎಲ್ಲಾ ಬೇಡಿಕೆಗಳನ್ನು ಕೂಲಂಕುಷವಾಗಿ ಪರಿಶೀಲನೆ ನಡೆಸಿ ಆ ಎಲ್ಲಾ ಸಮಿತಿಗಳು ತನ್ನ ವರದಿಗಳನ್ನು ಕೊಟ್ಟಿವೆ. ಇದರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಾನು ನಾಲ್ಕನೇಯ ಬಾರಿಗೆ ವಿಧಾನಸಭೆಯಲ್ಲಿ ಕೆಲಸ ಮಾಡತಕ್ಕ ಅವಕಾಶ ನನಗೆ ಒದಗಿ ಬಂದಿದೆ. ಹಿಂದೆಲ್ಲಾ ಬಜೆಟ್ ಅಧಿವೇಶನ ಎಂದರೆ ಆ ಕಡೆ ಕುಳಿತಿರತಕ್ಕ ಆಡಳಿತ ಪಕ್ಷದವರು ಯಾರೇ ಆಗಿರಲಿ ತುದಿಗಾಲ ಮೇಲೆ ಅವರು ನಿಂತಿರುತ್ತಿದ್ದರು. ಯಾವ ಬೇಡಿಕೆ ಬಂದಾಗಲೂ ಏನು ವಿಚಾರ ಪ್ರಸ್ತಾಪವಾಗುತ್ತದೆ. ಅದಕ್ಕೆ ನಾವು ಏನು ಉತ್ತರ ಕೊಡಬೇಕಾಗುತ್ತದೆ ಎಂದು ಮಂತ್ರಿಗಳು ಇರುತ್ತಿದ್ದರು. ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನನ್ನ ಬೇಡಿಕೆಯಲ್ಲಿ ಯಾರು ಏನು ವಿಚಾರ ಪ್ರಸ್ತಾಪ ಮಾಡುತ್ತಾರೆ ಎಂದು ನಾವು ಕೂಡ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದೆವು. ಎಚ್ಚರಿಕೆಯಿಂದ ಇರುತ್ತಿದ್ದೆವು. ಮತ್ತು ಸಾಕಷ್ಟು ಹೋಂ ವರ್ಕ್ಸ್ ಕೂಡ ಮಾಡಿಕೊಂಡು ಬಂದು ಕುಳಿತಿರುತ್ತಿದ್ದೆವು. ಜೊತೆಗೆ

ಅನೇಕ ಮಂತ್ರಿಗಳು ಬಹಳ ಕಷ್ಟಪಟ್ಟು ವಿಧಾನಸಭೆಯಲ್ಲಿ ಬೇಡಿಕೆ ಚರ್ಚೆಯಾಗುತ್ತದೆ ಎಂದು ಬಹಳ ವಿಜಿಲೆಂಟಾಗಿ ಕೂಡ ಕೆಲಸ ಮಾಡುತ್ತಿದ್ದೆವು. ಅಧಿಕಾರಿಗಳು ಕೂಡ ಇಲಾಖಾ ಮುಖ್ಯಸ್ಥರು ಸಹ ಅಷ್ಟೇ ಯಾವ ವಿಚಾರ ಪ್ರಸ್ತಾಪ ಮಾಡುತ್ತಾರೋ ಈ ಬೇಡಿಕೆಯಲ್ಲಿ ಚರ್ಚೆಗೆ ಬಂದಾಗ ಎಂದು ಮಂತ್ರಿಗಳಿಗಿಂತ ತುದಿಗಾಲಿನಲ್ಲಿ ಅಧಿಕಾರಿಗಳು ನಿಲ್ಲುತ್ತಿದ್ದರು. ಇವತ್ತು ಆ ಪರಿಸ್ಥಿತಿ ಸಂಪೂರ್ಣವಾಗಿ ಬದಲಾವಣೆಯಾಗಿದೆ. ಮಂತ್ರಿಗಳು ಇಷ್ಟಪಟ್ಟರೆ ಸಮಿತಿ ಮುಂದೆ ಹೋಗಬಹುದು. ಅಥವಾ ಸಮಿತಿ ಇಷ್ಟಪಟ್ಟರೆ ವಿಷಯ ಸಮಿತಿ ಮುಂದೆ ಬರಬಹುದು. ವಿಷಯ ಸಮಿತಿಯಲ್ಲಿ ಅಧಿಕಾರಿಗಳು ಸಮಿತಿ ಮುಂದೆ ಬರುತ್ತಾರೆ. ಇಲ್ಲಿಯವರೆಗೆ ಕೂಡ ನಾನೂ ಒಂದು ಸಮಿತಿಯಲ್ಲಿ ಕೆಲಸ ಮಾಡಿರುವುದರಿಂದ ಆ ಸಮಿತಿ ಯಾವ ರೀತಿ ಕೆಲಸ ಮಾಡಿದೆ ಎಂದರೆ ಬೇಡಿಕೆಗೆ ಸಂಬಂಧಪಟ್ಟಂತೆ ನಾವು ಏನು ವಿಚಾರವನ್ನು ಕೇಳುತ್ತೇವೋ ಅಲ್ಲಿ ಪ್ರಶ್ನೆ ಏನು ಬರುತ್ತದೆಯೋ ಅದಕ್ಕೆ ಮಾತ್ರ ಇವತ್ತಿನದಿವಸ ಅಲ್ಲಿ ಉತ್ತರ ಕೊಡತಕ್ಕ ಪರಿಸ್ಥಿತಿ ಉಂಟಾಗಿದೆ. ಕೊಟ್ಟಿದ್ದಾರೆ. ಅಷ್ಟೇ ವಿನಹ ನಾವು ಹೇಳತಕ್ಕ ಅನೇಕ ವಿಚಾರಗಳನ್ನು ಅಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕೂಡ ಅವಕಾಶ ಇರಲಿಲ್ಲ. ಮತ್ತೆ ಅದರ ಬಗ್ಗೆ ಬೆಳಕು ಚೆಲ್ಲತಕ್ಕ ಒಂದು ಅವಕಾಶ ಕೂಡ ಬಂದಿಲ್ಲ. ಅದಕ್ಕೆ ಸಮಜಾಯಿಸಿ ಏನು ಬಂತು ಎಂದರೆ ಇದು ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಮೊದಲನೆಯ ಸಭೆ. ಮೊದಲನೆಯ ವರದಿಯನ್ನು ಕೊಡುವ ಕಾರಣದಿಂದ ಬೇಡಿಕೆಗಳಿಗೆ ಮಾತ್ರ ಸೀಮಿತವಾದ ವರದಿಯನ್ನು ಕೊಟ್ಟು ನಂತರ ಇಲಾಖೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಸಹ ಸಮಿತಿಗಳು ನೋಡಬಹುದು ಎಂದು ಉತ್ತರ ನಮಗೆ ಬಂದಿದೆ. ಬಹುಮುಖ್ಯವಾದ ಲೋಪ ನನ್ನಲ್ಲಿ ಕಂಡುಬಂದಿದ್ದು ಏನೆಂದರೆ ಇವತ್ತು ಏನಾಗಿದೆ ಎಲ್ಲಾ ಬೇಡಿಕೆಗಳೂ ಸೇರಿ ನಾವು ಚರ್ಚೆ ಮಾಡತಕ್ಕ ಪರಿಸ್ಥಿತಿ ಕಾಲದ ಒತ್ತಡದಿಂದ ಒದಗಿಬಂದಿದೆ. ನನ್ನ ಅಂದಾಜಿನಲ್ಲಿ ಸುಮಾರು 25ರಿಂದ 30 ಬೇಡಿಕೆಗಳು ಚರ್ಚೆಗೆ ಬರುತ್ತಿದ್ದು ಅದು ನಮ್ಮ ಮುಂದೆ ಇದೆ. ಎಲ್ಲವನ್ನೂ ಸೇರಿಸಿ ಉಂಡೆ ಮಾಡಿ ಚರ್ಚೆ ಮಾಡತಕ್ಕ ಪರಿಸ್ಥಿತಿ ಇವತ್ತು ಕಾಲದ ಮಿತಿಯಿಂದ, ಕಾಲದ ಅಭಾವದಿಂದ ಒದಗಿಬಂದಿದೆ. ಇವತ್ತು ಯಾವ ಬೇಡಿಕೆಯ ಮೇಲೆ ಏನು ಮಾತನಾಡಬೇಕು ಎಂಬುದನ್ನು ಓದುವುದೇ ಕಷ್ಟ ಆಗತಕ್ಕ ಪರಿಸ್ಥಿತಿ ಉಂಟಾಗಿದೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಒಂದು ಲೋಪ ಏನು ಕಾಣುತ್ತಿದೆ ಎಂದರೆ ವಿಷಯ ಸಮಿತಿಗಳು ಬೇರೆ ಸದನ ಸಮಿತಿಗಳು ಯಾವ ರೀತಿ ಕೆಲಸ ಮಾಡುತ್ತವೆಯೋ ಅದೇ ರೀತಿ ಕೆಲಸ ಮಾಡುತ್ತಿವೆ.

4.20 ಪಿ.ಎಂ.

ಅಲ್ಲಿ ಮುಖ್ಯವಾಗಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳು ಏನವೆ, ಪತ್ರಿಕಾ ಮಾಧ್ಯಮ ಏನಿದೆ ಅಲ್ಲಿ ಪ್ರವೇಶವಿಲ್ಲ. ಪತ್ರಿಕಾ ಪ್ರತಿನಿಧಿಗಳಿಗೆ ಅಲ್ಲಿ ಪ್ರವೇಶವಿಲ್ಲ. ಇವತ್ತು ವಿಧಾನಸಭೆಯಲ್ಲಿ ಚರ್ಚೆಯಾದಾಗ ನಾವು ಮಾತನಾಡತಕ್ಕ ಪ್ರತಿಯೊಂದು ಪದವನ್ನು ನಮ್ಮ ಮತದಾರರಿಗೆ ತಲುಪಿಸತಕ್ಕ ವ್ಯವಸ್ಥೆಯಿರುವ ಕಾರಣದಿಂದಲೇ ಇವತ್ತು ಪತ್ರಿಕಾ ಪ್ರತಿನಿಧಿಗಳಿಗೆ ವಿಧಾನಸಭೆ ಮತ್ತು ವಿಧಾನಪರಿಷತ್‌ಗಳಲ್ಲಿ ಪತ್ರಿಕಾಗ್ಯಾಲರಿಗಳನ್ನು ಮಾಡಿ ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೇವೆ. ರಾಜ್ಯದ ಪ್ರಜೆ ಯಾರೇ ಬಂದರೂ ಅವರಿಗೆ ಅವಕಾಶವಿದ್ದು, ಬಂದರೆ

ಅವರು ಮೇಲುಗಡೆ ಗ್ಯಾಲರಿಯಲ್ಲಿ ಕುಳಿತು ನೋಡತಕ್ಕ ಅವಕಾಶವನ್ನು ನಾವು ಮಾಡಿಕೊಟ್ಟಿದ್ದೇವೆ. ಇದು ಮುಖ್ಯ. ಇದು ಓಪನ್ ಸೆಕ್ಷನ್. ಯಾರೂ ಬೇಕಾದರೂ ಬಂದು ನೋಡುವುದಕ್ಕೆ ಅವಕಾಶವಿದೆ. ವಿಷಯ ಸಮಿತಿಗಳಲ್ಲಿ ಏನಾಗುತ್ತದೆ ಯಾರು ಸಂಬಂಧಪಟ್ಟಿರುತ್ತಾರೆ ಅವರು ಸದಸ್ಯರು ಅಧಿಕಾರಿಗಳನ್ನು ಬಿಟ್ಟರೆ ಉಳಿದವರಿಗೆ ಪ್ರವೇಶವಿಲ್ಲ. ಇದು ಇನ್ ಕ್ಯಾಮೆರಾ ಮೀಟಿಂಗ್. ನಮ್ಮ ಪ್ರಭುಗಳು ಪ್ರಜೆಗಳಿಗೆ ನಾವು ಏನು ಮಾಡುತ್ತೇವೆನ್ನುವುದು ವರದಿ ರೂಪದಲ್ಲಿ ಮುಟ್ಟುತ್ತದೆಯೇ? ಇಲ್ಲಿ ನಡೆಯತಕ್ಕ ವಿಧಾನಸಭೆಯ ನಡವಳಿಕೆ ಪ್ರತಿಯೊಂದು ಅಕ್ಷರ ಪ್ರಜೆಗಳಿಗೆ ಮುಟ್ಟುತ್ತದೆ. ವಿಷಯ ಸಮಿತಿಗಳಲ್ಲಿ ಮುಕ್ತ ಅವಕಾಶವಿಲ್ಲ. ಇದರ ಬಗ್ಗೆ ಬಹಳ ಆಳವಾಗಿ ಅನೇಕ ಸಂದರ್ಭಗಳಲ್ಲಿ ನಮ್ಮ ಕರ್ತವ್ಯವನ್ನು ನಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಿದ್ದೇವೆಯೇ ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳಬೇಕಾಗಿದೆ. ಅದಕ್ಕೆ ಇಲ್ಲಿಯವರೆಗೂ ನನಗೆ ಸಮರ್ಪಕವಾದ ಉತ್ತರ ಬಂದಿಲ್ಲ. ಇಂತಹ ಒಂದು ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಮಾತ್ರವಿಲ್ಲ. ಪಾರ್ಲಿಮೆಂಟ್‌ನಲ್ಲಿ ಈ ಪದ್ಧತಿಯಿದೆ. ನಮ್ಮ ಪಕ್ಕದ ರಾಜ್ಯವಾದ ಕೇರಳದಲ್ಲಿದೆ. ಇತರೆ ಬೇರೆ ರಾಜ್ಯಗಳಲ್ಲೂ ಇದೆ. ಇದು ಒಂದು ಹೊಸ ಪ್ರಯೋಗವನ್ನು ಮಾಡತಕ್ಕ ಪರಿಸ್ಥಿತಿಯಲ್ಲಿದ್ದೇವೆ. ನನ್ನ ಅಭಿಪ್ರಾಯದಲ್ಲಿ ವಿಷಯ ಸಮಿತಿ ಇದು ಮೊದಲನೆಯ ವರ್ಷವಾಗಿರುವುದರಿಂದ ಇದು ಸಂಪೂರ್ಣವಾಗಿ ಉಪಯೋಗಿ ಅಥವಾ ನಿರುಪಯೋಗಿ ಎಂದು ಹೇಳತಕ್ಕ ಮಾತನ್ನು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಇದು ಯಾವ ರೀತಿ ನಡೆಯುತ್ತದೆ ಎಂಬುದನ್ನು ಮುಂದೆ ಹೇಳಬೇಕಾಗುತ್ತದೆ. ಒಂದೆರಡು ವರ್ಷಗಳಾದ ಮೇಲೆ ಅದರ ಪರಿಣಾಮ ಏನಾಗುತ್ತದೆಂದು ಗೊತ್ತಾಗುತ್ತದೆ. ಇದೇ ರೀತಿಯ ವ್ಯವಸ್ಥೆಯನ್ನು ಇಟ್ಟುಕೊಳ್ಳಬೇಕೇ ಬೇಡವೇ ಎನ್ನುವುದನ್ನು ಆಗ ಹೇಳಬೇಕಾಗುತ್ತದೆ. ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್‌ಕ್ಯಾಮೆರಾ ಮೀಟಿಂಗ್ ಮಾಡುವುದನ್ನು ಬಿಟ್ಟು ಅಲ್ಲಿ ಪತ್ರಿಕಾ ಪ್ರತಿನಿಧಿಗಳಿಗೂ ಮುಕ್ತ ಅವಕಾಶವಿರಬೇಕಾಗುತ್ತದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಹಾಗೆ ಇರಬೇಕಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಬೇಡಿಕೆಗಳ ಬಗ್ಗೆ ನಾನು ಈಗಲೇ ಹೇಳಿದ್ದೇನೆ. 25-30 ಬೇಡಿಕೆಗಳು ಇವೆ. ಅದನ್ನು ಓದುವುದಕ್ಕೆ ಹೋದರೆ ದೊಡ್ಡ ಪಟ್ಟಿಯಾಗುತ್ತದೆ. ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಈಗ ನೇರವಾಗಿ ಎಕ್ಸೈಸ್ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಆಶಾದಾಯಕವಾಗಿ ಎಕ್ಸೈಸ್ ಬಾಬಿನಲ್ಲಿ ಬಹಳ ಹಣ ಬರುತ್ತದೆ ಸುಮಾರು 700-800 ಕೋಟಿ ರೂಪಾಯಿ ಬರುತ್ತದೆ ಎನ್ನತಕ್ಕ ಮಾತನ್ನು ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಈ ವರ್ಷ ಏನಾಗಿದೆ ಎನ್ನತಕ್ಕ ಚಿತ್ರ ಹೊರಗಡೆ ಬರತಕ್ಕ ಅವಶ್ಯಕತೆಯಿದೆ. ಈ ವರ್ಷದ ಎಕ್ಸೈಜ್ ವರ್ಷದಲ್ಲಿ ಹೊಸ ನಿಯಮಗಳನ್ನು.....

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಸದಸ್ಯರಾದ ಬೈರೇಗೌಡರು ಪ್ರತಿ ವರ್ಷ ನಾನು ನೋಡುತ್ತಿದ್ದೇನೆ. ಎಕ್ಸೈಸ್ ಬಗ್ಗೆ ಬಹಳ ಆಸಕ್ತಿಯಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ಎಕ್ಸೈಸನ್ನು ಸ್ಪೆಷಲೈಸ್ ಮಾಡಿಕೊಂಡಿದ್ದೀರಾ ಹೇಗೆ?

ಶ್ರೀ ಸಿ. ಬೈರೇಗೌಡ : ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಹೇಳಿದ ಹಾಗೆ ಹೌದು, ಸ್ವಲ್ಪ ವಿಶೇಷವಾಗಿ ನನ್ನ ಗಮನ ಅದರ ಮೇಲೆ ಹರಿಯುತ್ತದೆ.

ಶ್ರೀ ರಮಾನಾಥ್ ರೈ : ಮಾನ್ಯ ಸದಸ್ಯರು ಎಕ್ಸೈಸ್ ವಿಷಯ ಸಮಿತಿಯಲ್ಲಿ ಸದಸ್ಯರಾಗಿದ್ದಾರೆಂದು ಕಾಣುತ್ತದೆ.

ಶ್ರೀ ಸಿ. ಭೈರೇಗೌಡ : ಹೌದು. ನಾನು ಹಣಕಾಸು ಇಲಾಖೆಯ ವಿಷಯ ಸಮಿತಿಯಲ್ಲಿದ್ದೇನೆ ಅದರಲ್ಲಿ ಎಕ್ಸೈಸ್ ಇಲಾಖೆಯೂ ಬರುತ್ತದೆ. ಅದಕ್ಕೆ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ಆ ವಿಚಾರ ಕೂಡ ಚರ್ಚೆಗೆ ಬಂದಿದೆ ಅಲ್ಲಿ ವರದಿಕೂಡ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮತ್ತೆ ಹೇಗೆ ಮಾತನಾಡುತ್ತೀರಿ?

ಶ್ರೀ ಸಿ. ಭೈರೇಗೌಡ : ಈ ಬಗ್ಗೆ ನಾನು ಆಗಲೇ ಅಧ್ಯಕ್ಷರನ್ನು ಕೇಳಿದ್ದೇನೆ.

ಉಪಾಧ್ಯಕ್ಷರು : ವಿಷಯ ಸಮಿತಿಗಳಲ್ಲಿ ಸದಸ್ಯರಾಗಿರುವವರು ಮಾತನಾಡಬಾರದೆಂದೇನೂ ರಿಸ್ಟ್ರಿಕ್ಷನ್ ಇಲ್ಲ. ಅವರು ಮಾತನಾಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಮೊದಲೇ ಪ್ರಸ್ತಾಪ ಎತ್ತಿದ್ದು ವಿಷಯ ಸಮಿತಿಗಳಲ್ಲಿ ಸದಸ್ಯರಾಗಿರುವವರು ಮಾತನಾಡಬಹುದೇ ಎಂದು ; ಅಧ್ಯಕ್ಷರು ರಿಸ್ಟ್ರಿಕ್ಷನ್ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಪಿ.ಜಿ. ಆರ್. ಸಿಂಧ್ಯ : ನಾನು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ವಿಷಯ ಸಮಿತಿಯಲ್ಲಿದ್ದೆ. ನಾನು ಮಾಡಿರತಕ್ಕ ಸಲಹೆಗಳನ್ನು ಕಮಿಟಿಯವರು ಒಪ್ಪಿಲ್ಲ ಹಾಗಾದರೆ ನನ್ನ ಸಲಹೆಗಳನ್ನು ಇಲ್ಲಿ ಹೇಳಬಾರದೆ? ವರದಿಯಲ್ಲಿ ಇಲ್ಲದಿರುವುದನ್ನು ಇಲ್ಲಿ ಹೇಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ವರದಿಯಲ್ಲಿ ಏನು ಇಲ್ಲ, ಅದನ್ನು ಅಲ್ಲಿ ಒಪ್ಪದಿದ್ದರೆ ಇಲ್ಲಿ ಹೇಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಲ್ಲಿ ಏನು ಹೇಳಿಲ್ಲ ಅದನ್ನು ಇಲ್ಲಿ ಹೇಳೋಣವೆಂದು ನಿಂತಿದ್ದೇನೆ. ಅದರಲ್ಲಿ ತಪ್ಪೇನು?

ಶ್ರೀ ಸಿ. ಬೈರೇಗೌಡ : ನಾವು ಹೇಳಿದ್ದನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಗಮನಿಸಲಿಲ್ಲ. ಅಲ್ಲಿ ಮಾತನಾಡಿರುವುದು ವರಬಾಟಮ್ ಇಲ್ಲಿ ಬರುವುದಿಲ್ಲ. ಅದು ಜನಗಳಿಗೆ ಮುಟ್ಟುವುದಿಲ್ಲ. ಅದೇ ನಮಗೆ ತಾಪತ್ರೆಯಾಗಿರತಕ್ಕದ್ದು.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಒಂದು ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ಅದು ಜನಗಳಿಗೆ ಮುಟ್ಟುತ್ತದೋ ಇಲ್ಲವೊ, ವ್ಯವಸ್ಥೆ ತಪ್ಪಾಗಬಹುದೇ ವಿನಹ ನಮ್ಮದು ತಪ್ಪಾಗುವುದಿಲ್ಲ ಅದಕ್ಕೋಸ್ಕರ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾಗಿಲ್ಲ. ತಾವು ಇದ್ದು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಪೂರ್ವ ಸಲಹೆಗಳನ್ನು ಅಲ್ಲಿ ಕೊಟ್ಟು ಅದರ ಮೇಲೆ ಮೊಸರು ಕಡೆದ ಹಾಗೆ ಕಡೆದು ಬೆಣ್ಣೆ ತೆಗೆದು ಇವತ್ತು ವರದಿಯನ್ನು ಇಟ್ಟಿದ್ದೀರಿ. ಹೊಸ ಬೇಡಿಕೆಗಳನ್ನು ಹೆಚ್ಚುವರಿ ಹಣ ಬೇಕಾದ್ದು ಎಲ್ಲಾ ಹೇಳಿದ್ದೀರಿ ಆ ವರದಿಯನ್ನು ಇಲ್ಲಿ ಇಟ್ಟಿದ್ದೀರಿ. ಅದು ಮಾಡಿದ ಮೇಲೆ ಬೇರೆಯವರಿಗೆ ಅವಕಾಶವನ್ನು ಕೊಡಬೇಕು. ನೀವೇ ಬಂದು ಇಲ್ಲ ಮಾತನಾಡುವುದಾದರೆ ಹೇಗೆ? ಇದು ಒಂದೇ ಬೇಡಿಕೆಯಲ್ಲಿ ಹಲವಾರು ಬಿಡಿಕೆಗಳಿವೆ. ತಾವು ಯಾವ ಕಮಿಟಿಯಲ್ಲಿ ಇದ್ದೀರಿ ಅದನ್ನು ಬಿಟ್ಟು ಬೇರೆ ಇಲಾಖೆಗಳ ಬಗ್ಗೆ ಮಾತನಾಡಬಹುದು. ಬೇರೆ ಇಲಾಖೆಗೂ ನಿಮ್ಮ ಅನುಭವದ ಷೇರ್ ಬರಲಿ.

ಶ್ರೀ ಸಿ. ಭೈರೇಗೌಡ : ನಾವು ಕಮಿಟಿಯಲ್ಲಿದ್ದು ಕೆಲಸ ಮಾಡಿದ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಬೈರೇಗೌಡರು ಎಕ್ಸೈಸ್ ಇಲಾಖೆಯನ್ನು ಏನಾದರೂ ಸ್ಪೆಷಲೈಸ್ ಮಾಡಿಕೊಂಡಿದ್ದೀರಾ ಎಂದು ಕೇಳಿದೆ.

ಶ್ರೀ ಸಿ. ಭೈರೇಗೌಡ : ನಾನು ತಾವು ಕೇಳಿದ್ದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಮಂತ್ರಿಗಳಾದ ಕಾಗೋಡು ತಿಮ್ಮಪ್ಪನವರು ಎದ್ದರು. ರಾಜ್ಯದಲ್ಲಿ ನಮ್ಮ ಬೊಕ್ಕಸಕ್ಕೆ ಆದಾಯ ತರತಕ್ಕ ಎರಡನೆಯ ಇಲಾಖೆ ಇದು. ಮೊದಲನೆಯ ಇಲಾಖೆ ವಾಣಿಜ್ಯ ತೆರಿಗೆ ಇಲಾಖೆ. ಎರಡನೆಯ ಇಲಾಖೆ ಈ ಎಕ್ಸೈಜ್ ಇಲಾಖೆ. ಏನಾಗುತ್ತಿದೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸಾಕಷ್ಟು ಹಣ ಸೋರಿ ಹೋಗುತ್ತಿದೆ. ನಾನು ಒಪ್ಪುತ್ತೇನೆ, ಯಾರೇ ಸರ್ಕಾರ ನಡೆಸಲಿ ಏನೇ ಆಗಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸೋರಿಕೆಯನ್ನು ಕಡಿಮೆ ಮಾಡಬಹುದೇ ವಿನಹ ಸಂಪೂರ್ಣವಾಗಿ ಅದನ್ನು ತೊಡೆದು ಹಾಕುತ್ತೇನೆ ಎನ್ನುವುದು ಆಗದಿರತಕ್ಕ ಮಾತು. ಏಕೆಂದರೆ, ಬೀದಿ ಬೀದಿಯಲ್ಲಿ ಒಂದೊಂದು ರಸ್ತೆಯಲ್ಲಿ ಸಾವಿರಾರು ಅಂಗಡಿಗಳು ಇರುತ್ತವೆ. ಲಕ್ಷಾಂತರ ಜನ ಅಸೆಸರಿಗಳು ಇರುತ್ತಾರೆ. ಅವರಿಗೆ ಕಾವಲು ಇರುವುದಕ್ಕ ಆಗುವುದಿಲ್ಲ. ಸೋರಿಕೆ ಇದ್ದೇ ಇರುತ್ತದೆ.

ಸೋರಿಕೆಯಾಗತಕ್ಕಂಥ ಹಣ ಏನಿದೆ, ಇದನ್ನು ನೂರಕ್ಕೆ ನೂರರಷ್ಟು ಅಲ್ಲದಿದ್ದರೂ ಶೇಕಡಾ 90-95ರಷ್ಟಾದರೂ ಕೂಡ ಕಡಿಮೆ ಮಾಡತಕ್ಕಂಥ ಅವಕಾಶ ಇದೆ. ಆ ಕಾರಣದಿಂದಲೇ ಅದು ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಹಣ ಇಲ್ಲಿ ಸೋರಿಕೆಯುಂಟಾಗುತ್ತಿದೆ ಅದು ರಾಜ್ಯಕ್ಕೆ ಅಗತಕ್ಕಂಥ ನಷ್ಟ ಬೊಗಸಕ್ಕೆ ಆಗತಕ್ಕಂಥ ನಷ್ಟವೆಂದು ಭಾವಿಸಿ ಈ ಸೋರಿಕೆ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ಆಸಕ್ತಿವಹಿಸಿರತಕ್ಕಂಥಾದ್ದು ಎನ್ನತಕ್ಕಂಥ ಮಾತನ್ನು ಮಾನ್ಯ ರಂಗನಾಥ್ ಅವರ ಗಮನಕ್ಕೆ ತಂದು ಇವತ್ತು ಮಾನ್ಯ ಅರ್ಥ ಸಚಿವರೂ ಆಗಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಬಹಳ ಆಶಾದಾಯಕವಾದ ಚಿತ್ರವನ್ನು ಅಂದರೆ, ಹಣ ಬರುತ್ತದೆ ಎಂದು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ತಾವು ಹರಾಜು ಹಾಕಿದ್ದೀರಿ. ತಾವು ಈ ಸಾರಾಯಿ ಸಗಟು ಮಾರಾಟವನ್ನು ತಾಲ್ಲೂಕು ಮತ್ತು ಪ್ರದೇಶಗಳ ಹೊಸ ವರ್ತನೆಯನ್ನು ಕೂಡ ಮಾಡಿದ್ದೀರಿ. ಮುಖ್ಯಮಂತ್ರಿಗಳು ಹೇಳಿದರು, ನೀವು ಹೇಳಿದ್ದನ್ನು ಮಾಡಿದ್ದೇವೆ

ಎಂದು. ನಾವು ಕೊಟ್ಟಿರತಕ್ಕಂಥ ಕೆಲವು ಸಲಹೆಗಳನ್ನು ಒಪ್ಪಿದ್ದಾರೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಪೂರ್ತಿಯಾಗಿ ನಮ್ಮ ಸಲಹೆಗಳನ್ನು ಅವರು ಒಪ್ಪಿಲ್ಲ. ಅದನ್ನು ಒಪ್ಪಿದ್ದರೆ ಇವತ್ತು ಏನು ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ, ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಬೆಂಗಳೂರನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಬೆಂಗಳೂರಿನಲ್ಲಿ ಮೊದಲಿನಿಂದಲೂ ಒಬ್ಬ ಕಂಟ್ರಾಕ್ಟರ್ ಇದ್ದರು ಬೆಂಗಳೂರು ಗ್ರಾಮಾಂತರ ಮತ್ತು ನಗರಪ್ರದೇಶಗಳಿಗೆ ಸಂಬಂಧಪಟ್ಟಂತೆ ಒಬ್ಬರೇ ಕಂಟ್ರಾಕ್ಟರ್ ವಹಿಸಿಕೊಂಡಿದ್ದರು. ಇವತ್ತು ಅವರಲ್ಲಿ ಪೈಪೋಟಿ ಬಂದು ಈಗ ಬೇರೆಯವರು ಬೆಂಗಳೂರು ನಗರಕ್ಕೆ ಸಾರಾಯಿ, ಮಾರಾಟ ಹಕ್ಕನ್ನು ಹರಾಜಿನಲ್ಲಿ ಪಡೆದಿದ್ದಾರೆ. ಇದರಿಂದ ಏನಾಗಿದೆ? ಎಷ್ಟು ಸಾರಾಯಿ ಬಳಕೆಯಾಗಬೇಕಿತ್ತೋ ಇವರ ಅಧಿಕೃತ ಲೆಕ್ಕದ ಪ್ರಕಾರವೇ ತೆಗೆದುಕೊಂಡರೆ ಅದು ಕಡಿಮೆಯಾಗಿದೆ. ಶೇಕಡಾ 40ರಿಂದ 50ರಷ್ಟು ಸಾರಾಯಿ ಅಧಿಕೃತವಾಗಿ ಬಳಕೆಯಾಗಬೇಕಾದದ್ದು ಕಡಿಮೆಯಾಗಿದೆ. ಆದರೆ ಕುಡಿಯುವವರು ಕಡಿಮೆಯಾಗಿಲ್ಲ. ಸರ್ಕಾರದ ಲೆಕ್ಕದಲ್ಲಿ ಅದು ಈವತ್ತಿನ ದಿವಸ ಕಡಿಮೆಯಾಗಿದೆ. ಇದರಿಂದ ಕುಡಿಯುವವರ ಸಂಖ್ಯೆ ಕಡಿಮೆಯಾಗುತ್ತದೆ ಎಂಬ ಭಾವನೆ ಇಲ್ಲ. ಇದು ಜ್ಞಾಪಕದಲ್ಲಿ ಇರಲಿ. ಸರ್ಕಾರದ ಲೆಕ್ಕದ ಪ್ರಕಾರ, ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ಶೇಕಡಾ ಹತ್ತರಷ್ಟು ಕುಡುಕರು ಜಾಸ್ತಿಯಾಗುತ್ತಾರೆ. ಕನ್‌ಸಮ್‌ಷನ್ ಜಾಸ್ತಿಯಾಗುತ್ತಿದೆ ಎನ್ನತಕ್ಕಂಥಾದ್ದು ಈ ಇಲಾಖೆ ಯವರದ್ದೇ ಒಂದು ಅಂದಾಜು. ಈ ಲೆಕ್ಕದ ಪ್ರಕಾರ ಈಗ ಕಳೆದ 1.7.94ರಿಂದ ಇಲ್ಲಿಯವರಗೆ ಪ್ರತಿತಿಂಗಳೂ ಎರಡರಿಂದ ಮೂರು ಲಕ್ಷ ಲೀಟರ್ ಸಾರಾಯಿ ಬಳಕೆಯಾಗುತ್ತಿದ್ದುದು ಅವರ ಲೆಕ್ಕದ ಪ್ರಕಾರವೇ ಕಡಿಮೆಯಾಗುತ್ತಿದೆ.

ಶ್ರೀ ಕೆ. ಎಚ್. ರಂಗನಾಥ್ : ಮಾನ್ಯ ಅಧ್ಯಕಷರೇ ಭೈರೇಗೌಡರು, ಹಾಗೂ ಚಂದ್ರೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ತಾವು ಚರ್ಚೆ ಮಾಡಬಹುದು ಎಂದು ಹೇಳಿದಿರಿ ಮತ್ತು ಅವರು ಎಕ್ಸೈಸ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಸುಮ್ಮನೆ ಸ್ವಲ್ಪ ಯೋಚಿಸುತ್ತಾ ಇದ್ದೆ. ಏಕೆಂದರೆ ನಮ್ಮ ಕಮಿಟಿ ವ್ಯವಸ್ಥೆಯನ್ನು ಹೊಸದಾಗಿ ಮಾಡಿದ್ದೇವೆ. ಅದು ಹೌಸ್ ಆಫ್ ಕಾಮನ್ಸ್‌ನಲ್ಲಿ ಇರತಕ್ಕಂಥ ಒಂದು ಪದ್ಧತಿಯನ್ನು ತಿದ್ದುಪಡಿ ತಂದು ಅಳವಡಿಸಿಕೊಂಡಿದ್ದೇವೆ. ಚರ್ಚೆಗೆಂದು ದಿನಗಟ್ಟಲೆ ಕುಳಿತುಕೊಂಡರೆ ಆಗುವುದಿಲ್ಲ. ಅದು ಸರಿಹೋಗುವುದಿಲ್ಲ. ಮತ್ತು ಕೆಲವು ಸಾರಿ ಗಿಲಿಟನ್ ಹಾಕುವಂಥ ಪರಿಸ್ಥಿತಿ ಬರುತ್ತದೆ. ಎಲ್ಲಾ ಖಾತೆಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ಆಗುವುದಿಲ್ಲ. ಅದರ ಬದಲು ಕಮಿಟಿ ಸಿಸ್ಟಮ್ ಮಾಡಿದರೆ ಅಲ್ಲಿ ಚರ್ಚೆ ಆಗುತ್ತದೆ. ತದನಂತರ ಇಲ್ಲಿ ಚರ್ಚೆ ಮಾಡುವುದಕ್ಕೆ ಕೂಡ ಬರುತ್ತದೆ ಎನ್ನತಕ್ಕಂಥಾದ್ದು ಇದರ ಸ್ಥೂಲವಾದ ತತ್ವ ಮತ್ತು ಹಿನ್ನಲೆ. ಆದರೆ ಪ್ರಮುಖವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದಾಗ, ನಾನು ಯೋಚನೆ ಮಾಡುತ್ತಿದೆ. ಇದರ ಜೊತೆಗೆ ಮಾನ್ಯ ಎಕ್ಸೈಸ್ ಮಂತ್ರಿಗಳು ಕೂಡ, ಮಾನ್ಯ ಸದಸ್ಯರಿಗೆ ತಾವು ಕಮಿಟಿಯಲ್ಲಿ ಇದ್ದವರು ಎಂಬ ಮಾತನ್ನು ಪ್ರಸ್ತಾಪ ಮಾಡಿದರು. ಆಮೇಲೆ ಬಜೆಟ್ ಬಹಳ ಪ್ರಾಮುಖ್ಯವಾದಂಥ ವಿಚರಾ. ಬಜೆಟ್ ಮೇಲೆ ಚರ್ಚೆ ಕೂಡ ಬಹಳ ಪ್ರಾಮಾಣಿಕವಾಗಿ ನಡೆಯುತ್ತದೆ. ಈ ಚರ್ಚೆಯನ್ನು ಮೂರು ವಿವಿಧ ವಿಷಯಗಳನ್ನು ನಾವು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡುತ್ತೇವೆ. ಒಂದು, ಸರ್ಕಾರದ ಇಡೀ ನೀತಿಯನ್ನು, ಈ ಇಲಾಖೆಗೆ ಸಂಬಂಧಪಟ್ಟಂತೆ ಒಪ್ಪದೇ ಇದ್ದರೆ ಅದಕ್ಕೆ ಒಂದು

ಕಟ್‌ಮೋಷನ್ ಅನ್ನು ತರುವುದು ನಮ್ಮ ರೂಲ್ಸ್‌ಆಫ್ ಪ್ರೋಸಿಜರ್‌ನಲ್ಲಿದೆ. ಅಥವಾ ಎಕನಾಮಿ ಪಾಲಿಸಿ ಹಾಗಿದೆ ಎಂದು ಹೇಳಿ, ಅದಕ್ಕೆ ಸಂಬಂಧಪಟ್ಟಂತೆ ಒಪ್ಪಿಕೊಳ್ಳದೇ ಹೋದರೆ ಅದಕ್ಕೆ ಒಂದು ಕಟ್ ಮೋರೂಲನಲ್ಲಿ ಇದೆ. ಮತ್ತು ಯಾವುದೇ ವಿಷಯವನ್ನು, ನಿರ್ಧಿಷ್ಟವಾದ ಗ್ರಿವಿನ್ಸಸ್ ಅಥವಾ ಅಲ್ಲಿ ಏನು ನಡೆಯುತ್ತದೆ ಅದನ್ನು ಹೈಲೈಟ್ ಮಾಡುವುದಕ್ಕೆ ಅದಕ್ಕೂ ಕೂಡ ಅವಕಾಶ ಇದೆ. ಇವತ್ತಿನ ದಿವಸಗಳಲ್ಲಿ ಕಟ್‌ಮೋಷನ್ ಅನ್ನು ಯಾರೂ ತರುವುದಿಲ್ಲ. ಸಾಮಾನ್ಯವಾಗಿ ಏನು ಕಟ್‌ಮೋಷನ್ ಬರುತ್ತದೆ. ಸಂಬಂಧ ಪಟ್ಟ ಇಲಾಖೆಗಳು ನೋಟ್ಸ್ ತಯಾರು ಮಾಡಿ ಅದನ್ನು ಸಭೆಯ ಮುಂದಿಟ್ಟು ಓಟಿಗಾಗಿ ಪ್ರೆಸ್ ಮಾಡತಕ್ಕಂಥಾದ್ದು ಇತ್ತು. ಇದು ಮೂರು ವಿಚಾರ. ರೂಲ್ 178ನ್ನು ಹೇಳಿ ಅದರ ಬಗ್ಗೆ ನಾನು ತಮ್ಮ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. 178ಎನಲ್ಲಿ ...that amount be reduced to rupee one. Then you will have to discuss the whole policy of the particular demand. ಹಾಗೆ ಎಂದು ಹೇಳಿ ಮಾಡಿದರೆ ಇಲ್ಲಿ ಚರ್ಚೆಯನ್ನು ಮಾಡಲಿಕ್ಕೆ ಬರುತ್ತದೆ. (ಬಿ)ನಲ್ಲಿ ಅದನ್ನು 100.ರೂ.ಗೆ ಹಾಗೆಂದು ಹೇಳಿ (b) that the amount of the demand be reduced by a specified amount ...

ಹಾಗೆ ಎಂದು ಹೇಳಿದರೆ ನಮೂದು ಮಾಡಿರತಕ್ಕಂಥ ಡಿಮಾಂಡ್‌ನ್ನು ಒಪ್ಪಿಕೊಳ್ಳಲಿಲ್ಲ ಎಂದು ಹೇಳಿ ಅದರಲ್ಲಿ ಎಕಾನಮಿ ಹೇಗೆ ತರಬಹುದು, ಆ ಪಾಲಿಸಿಯನ್ನು ಹೇಗೆ ಇಂಟ್ರೋಡ್ಯೂಸ್ ಮಾಡಬೇಕು ಎಂದು ಹೇಳಿ ಪ್ರಸ್ತಾಪ ಆಗಿದೆ. ಮತ್ತೆ ಯಾವುದೇ ನಿರ್ಧಿಷ್ಟವಾದ ವಿಷಯಗಳು ನಮ್ಮ ಮಾನ್ಯ ಸದಸ್ಯರ ಗಮನಕ್ಕೆ ಬಂದಿರುತ್ತದೆ, ಅದನ್ನು ಪೈಲೈಟ್ ಮಾಡತಕ್ಕಂಥಾದ್ದು. ಅದಕ್ಕೆ ಚರ್ಚೆಯನ್ನು ಮಾಡತಕ್ಕಂಥಾದ್ದು ಸರ್ಕಾರದ ಗಮನಕ್ಕೆ ತಂದು ತಿದ್ದುವುದಕ್ಕೆ ಪ್ರಯತ್ನ ಪಡುವುದು'ಸಿ'ನಲ್ಲಿ ಪ್ರಸ್ತಾಪವಾಗಿದೆ.

(c) It may bere-duced to Rs. 190 ... ಎಂದು ಮಾಡಿ ಮೂರು ತರಹದ ಕಟ್‌ಮೋಷನ್ಸ್ ಕಳುಹಿಸಿದರೆ ಅದಕ್ಕೆ ಸಂಬಂಧಪಟ್ಟ ಇಲಾಖೆಯವರು ನೋಟ್ಸ್‌ಗಳನ್ನು ತಾಯರು ಮಾಡಿರುತ್ತಾರೆ. ತಮಗೂ ಅದನ್ನು ಕಳುಹಿಸಿರುತ್ತಾರೆ. ತಾವು ಆ ವಿಚಾರಗಳನ್ನು ಪ್ರಸ್ತಾಪ್ರವಮಾಡುವುದಕ್ಕೆ ಅನುಕೂಲವಾಗುತ್ತದೆ. ಸಂಬಂಧಪಟ್ಟಂಥ ಸದಸ್ಯರು ಸಮಿತಿಯಲ್ಲಿಇದ್ದಾರೆ. ಎಂಬ ಮಾತನ್ನು ಹೇಳುತ್ತಿದ್ದಾರೆ. ಅವರು ಇಲಾಖೆಗಳಿಗೆ ಸಂಬಂಧಪಟ್ಟಂತೆ ನೀತಿಯನ್ನು ಒಪ್ಪಿಕೊಳ್ಳತಕ್ಕಂಥಾದ್ದು ಆದರೆ ಅವರು ಕಟ್‌ಮೋಷನ್ ಕಳುಹಿಸದೇ ಇರುವುದರಿಂದ ಒಪ್ಪಿಕೊಂಡಿದ್ದಾರೆ ಎಂಬ ಭಾವನೆ ಬರುತ್ತದೆ. ಸಮಿತಿಯಲ್ಲಿ ಅವರು ಅದನ್ನು ಒಪ್ಪಿಕೊಂಡಿದ್ದರೆ ಅದನ್ನು ಒಪ್ಪಿಕೊಂಡಂತೆ ಭಾವನೆಯಾಗುತ್ತದೆ. ಅಥವಾ specific grievances in the administration of that particular department, notice will have to be given if he wants to discuss on the floor of the House.

ಅದನ್ನು ತರುವುದಕ್ಕೆ ಪ್ರಸ್ತಾಪ ಮಾಡದೇ ಹೋದರೆ ಚರ್ಚೆಗೆ ಅವಕಾಶ ಇಲ್ಲ ಎನ್ನುವ ಅರ್ಥ ನನಗೆ ಬರುತ್ತಿದೆ. It is only a hypothetical proposition I am putting before you. ಆದ್ದರಿಂದ ನಾನು ಮೊದಲೇ ಹೇಳಿದೆ. ಈ ಕಮಿಟಿ ಸಿಸ್ಟಮ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಇದ್ದುದನ್ನು

ಅಳವಡಿಸಿಕೊಂಡಿರುವುದರಿಂದ, ಅದಕ್ಕಾಗಿ ಹೊಸ ರೂಲ್ಸ್ ಮಾಡಿರುವುದರಿಂದ ಮತ್ತು ಪ್ರಥಮಬಾರಿಗೆ ಇಲ್ಲಿ ಪ್ರಸ್ತಾಪ ಮಾಡುತ್ತಾ ಇರುವುದರಿಂದ, ಮಾನ್ಯ ಚಂದ್ರೇಗೌಡರು ಮತ್ತು ಭೈರೇಗೌಡರು ಪ್ರಸ್ತಾಪ ಮಾಡಿದರು. ನನಗನ್ನಿಸುತ್ತದೆ ಏನೆಂದರೆ, ಅಧ್ಯಕ್ಷ ಪೀಠದಿಂದ ಏನಾದರೂ ಒಂದು ಸೂಕ್ತವಾದಂಥ ಮಾರ್ಗದರ್ಶನ ನೀಡಿದರೆ ಬಹಳ ಮಟ್ಟಿಗೆ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡು ಮಾಡಬಹುದು. ಏಕೆಂದರೆ ಇದನ್ನು ಬಹಳ ದಿವಸ ಎಳೆಯತಕ್ಕಂಥ ಪರಿಸ್ಥಿತಿ ಬರುತ್ತದೆ. To cut short the discussing, to reduce the time that has been allotted for the discussion ಈ ಒಂದು ಹಿನ್ನೆಲೆಯಲ್ಲಿ ನನಗನ್ನಿಸುತ್ತದೆ, ತಮ್ಮಿಂದ ಮಾರ್ಗದರ್ಶನ ನಮಗೆ ಬಂದರೆ, ಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸತಕ್ಕಂಥ ಸದಸ್ಯರಿಗೆ ಅನುಕೂಲವಾಗಬಹುದು. ಮತ್ತು ಸರ್ಕಾರದ ವತಿಯಿಂದ ಏನು ಪ್ರಸ್ತಾಪ ಮಾಡಬೇಕಾಗುತ್ತದೆ. ನಮ್ಮ ಇಲಾಖೆಯ ಅಧಿಕಾರಿಗಳೆಲ್ಲಾ ಅಲ್ಲಿ ಕಮಿಟಿ ಮುಂದೆ ಹೋಗಿರುತ್ತಾರೆ, ಕೆಲವು ಮಂತ್ರಿಗಳು ಹೋಗಿದ್ದಾರೋ ಗೊತ್ತಿಲ್ಲ, ನಾನಂತೂ ಹೋಗಿರಲಿಲ್ಲ, ಈ ಒಂದು ಹಿನ್ನೆಲೆಯಲ್ಲಿ ತಮ್ಮಿಂದ ಮಾರ್ಗದರ್ಶನ ಬಂದರೆ ಒಳ್ಳೆಯದು. ಇದನ್ನು ಪ್ರಸ್ತಾಪ ಮಾಡುವಾಗ I don't want to interfere in the discussion of the Hon'ble Member. He may continue. To help us to understand the functioning of the discussion,ನಮಗೆ ತಮ್ಮ ಅಧ್ಯಕ್ಷಪೀಠದಿಂದ ಮಾರ್ಗದರ್ಶನ ಬಂದರೆ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಶ್ರೀ ಕೆ.ಎಚ್. ರಂಗನಾಥ್ ಅವರು ಹಿರಿಯ ಸಂಸದೀಯ ಪಟುಗಳು. ಮಾನ್ಯ ಅಧ್ಯಕ್ಷರು ನಿರ್ಣಯ ಕೊಡುವುದಕ್ಕೆ ಮುಂಚೆ ಅವರು ಎತ್ತಿರತಕ್ಕಂಥ ವಿಚಾರ ಬಗ್ಗೆ ನನ್ನ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಮೊದಲನೆಯದಾಗಿ ನಾನು ಸಮಾಜಕಲ್ಯಾಣ ಇಲಾಖೆಯ ಸಮಿತಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಒಂದೆರಡು ಸಭೆಗಳನ್ನು ಬಿಟ್ಟರೆ ಎಲ್ಲಾ ಸಭೆಗಳಲ್ಲೂ ನಾನು ಭಾಗವಹಿಸಿದ್ದೇನೆ. ಕಳೆದ ಎರಡು-ಮೂರು ವರ್ಷಗಳಲ್ಲಿ ಸಮಾಜಕಲ್ಯಾಣ ಇಲಾಖೆಯ ಮತ್ತು ಕಳೆದ ವರ್ಷ ಯಾವ್ಯಾವ ರೀತಿಯ ಪರ್‌ಫಾರ್ಮೆನ್ಸ್‌ನ್ನು ವೇರಿಯಸ್ ಪ್ರೋಗ್ರಾಮ್‌ಗಳಲ್ಲಿ ಮಾಡಿದೆ ಎನ್ನತಕ್ಕದ್ದನ್ನು ನಾವು ರಿವ್ಯೂ ಮಾಡಿದ್ದೇವೆ.

ಸೆಕ್ರೆಟರಿಗಳು ಡೈರೆಕ್ಟರ್‌ಗಳು ಸೋಷಿಯಲ್‌ವೆಲ್ಫೇರ್ ಬಿಸಿಎಂ ಡೈರೆಕ್ಟರ್ ಆಮೇಲೆ ವುಮೆನ್ ಡೈರೆಕ್ಟರ್ ಅವರೆಲ್ಲರೂ ಬಂದಿದ್ದರು ನಮಗೆ ಸಮಂಜಸವಾದ ಉತ್ತರವನ್ನು ಬಹುತೇಕ ವಿಚಾರಗಳಲ್ಲಿ ಕೊಟ್ಟಿದ್ದಾರೆ. ಅದಾದ ನಂತರ ನಾವು ಕೆಲವು ರೆಕಮೆಂಡೇಷನ್ಸ್‌ನ್ನು ಮಾಡಿದ್ದೇವೆ. ಕೆಲವು ಬಗ್ಗೆ ಯೂನಾನಿಮಸ್ ಇದೆ ಕೆಲವು ಬಗ್ಗೆ ಯುನಾನಿಮಸ್ ಇಲ್ಲ. ಈಗ ನಾವು ಹೇಳತಕ್ಕಂಥಾದ್ದು ಒಂದು ಇದರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶವೇ ಇಲ್ಲ ಎನ್ನುವ ನಿರ್ಣಯ ತಾವು ಅಥವಾ ಈ ಸದನ ಬರುವುದಾದರೆ ಈಗ ನಾವು ವಿರೋಧಪಕ್ಷದಲ್ಲಿದ್ದೇವೆ. ಆ ಸಮಿತಿಯಲ್ಲಿ ಬಹಳ ಹೆಚ್ಚಿನ ಸದಸ್ಯರು ನಾವು ಆಡಳಿತ ಪಕ್ಷದಲ್ಲಿದ್ದರೆ ನಮ್ಮವರು ಇರುತ್ತಾರೆ ನೀವು ಆಡಳಿತ ಪಕ್ಷದಲ್ಲಿದ್ದರೆ ನಿಮ್ಮವರು ಇರುತ್ತಾರೆ. ನಾವು ಏನೇ ಹೇಳಿದರೂ ಸಹ ಒಬ್ಬರದ್ದು ಇಬ್ಬರದ್ದು ಅಭಿಪ್ರಾಯ ಆಗುತ್ತದೆಯೇ ಹೊರತು ಅದು ನಮ್ಮ ಅಭಿಪ್ರಾಯಕ್ಕೆ ಅಲ್ಲಿ

ಮನ್ನಣೆ ಸಿಗುವುದಿಲ್ಲ. ಮೆಜಾರಿಟಿ ಒಪಿನಿಯನ್ ಪ್ರಕಾರ ಅದು ಹೋಗುತ್ತದೆ. ಈಗ ಉದಾಹರಣೆಗೆ ನಾವು ಏನು ಹೇಳಿದ್ದೇವೆ. ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವುದೋ ಒಂದು ಪರ್ಟಿಕ್ಯುಲರ್ ಪ್ರೋಗ್ರಾಂಗೆ ನೀವು ಕೊಡುತ್ತಾ ಇರತಕ್ಕಂಥದುದ್ದು ಸಾಕಾಗುತ್ತಿಲ್ಲ ಮತ್ತು ತಾವು ಯಾವ ರೀತಿಯಲ್ಲಿ ಅದನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೀರಿ ಅದೂ ಕೂಡ ಸರಿಯಾಗಿಲ್ಲ ಎಂದು ಹೇಳಿದ್ದೇವೆ. ಅದನ್ನು ಕಮಿಟಿಯವರು ಒಪ್ಪಲಿಲ್ಲ. ಅದನ್ನು ನಾನು ಇಲ್ಲಿ ಎಕ್ಸ್‌ಪ್ರೆಸ್ ಮಾಡುವುದೋ ಬಿಡುವುದೋ ಇದನ್ನು ನಾನು ಇಲ್ಲಿ ಎಕ್ಸ್‌ಪ್ರೆಸ್ ಮಾಡಲೇಬೇಕಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಒಬ್ಬ ಸದಸ್ಯರಾಗಿರತಕ್ಕಂಥವರು ಈ ವಿಚಾರದಲ್ಲಿ ಮಾತನಾಡಬಹುದೇ ಇಲ್ಲವೇ ಎನ್ನುವುದನ್ನು ತೀರ್ಮಾನ ಮಾಡುವುದಕ್ಕಿಂತ ಮುಂಚೆ ಈ ವಿಚಾರವನ್ನು ಕೂಡ ತಾವು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತೇನೆ. ತಾವು ಆಲೋಚನೆ ಮಾಡಿ ನಾಳೆ ಕೊಡಿ ರೂಲಿಂಗ್.

ಶ್ರೀ ಕೆ. ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, I do not know whether I made myself clear or whether I have understood properly.

ನಾನು 178 ಅನ್ನು ಪ್ರಸ್ತಾಪ ಮಾಡಿದೆ. ರೂಲ್ಸ್ ಆಫ್ ಪ್ರೊಸಿಜರ್ ನೋಡಿದರೆ ಸರ್ಕಾರದ ವತಿಯಿಂದ ಡಿಮ್ಯಾಂಡ್ಸ್ ಮೂವಿಂಗ್ ಮೂಲಕ ಬಜೆಟ್ ಡಿಸ್ಕಷನ್ ಪ್ರಾರಂಭವಾಗುತ್ತದೆ. ಅದನ್ನು we will place it before the House. ವಿರೋಧಪಕ್ಷದವರು ಅಥವಾ ಯಾವುದೇ ಒಬ್ಬ ಸದಸ್ಯ ಕಟ್ ಮೋಷನ್ ಮೂವ್ ಮಾಡಿದಾಗ ಅದರಿಂದ ಡಿಸ್‌ಕಷನ್ ಪ್ರಾರಂಭ ಮಾಡಬಹುದು. ಡಿಸ್‌ಕಷನ್‌ನಲ್ಲಿ ಮೂರು ವಿಧವಾದ ಡಿಸ್‌ಕಷನ್ಸ್ ಇದೆ. ಒಂದು Either accepting the policy or opposing the policy, the Hon'ble Member would like to oppose the whole policy of the Government in his Cut Motion under 178(A) or if you want to introduce some economy.

ಅದನ್ನು ಇಂಟರ್‌ಡ್ಯೂಸ್ ಮಾಡಬೇಕೆಂದು ಹೇಳುತ್ತದೆ. He moves a Cut Motion under Section 178(B) or if you want to raise grievances on the Floor of the House, he moves an amendment under 178 (c).

ಇದನ್ನು ಮಾಡಲಿಕ್ಕೆ ಸಾಧ್ಯ ಇದೆ. ಇದರಲ್ಲೂ ಕೂಡ ಇವತ್ತು ಮಾಡಲಿಕ್ಕೆ ಬರುತ್ತದೆ. In the absence of any Cut Motion and hving been in a Committee, having acepted the decision of the Committee, would it be still open for the Hon'ble Member to raise any discussion after participating ....

ಈ ದೃಷ್ಟಿಯಲ್ಲಿ ಈ ಹಿನ್ನೆಲೆಯಲ್ಲಿ ತಮ್ಮಿಂದ ಒಂದು ಸೂಚನೆ ಒಂದು ಮಾರ್ಗದರ್ಶನ ಬೇಕು ಎಂದು ಹೇಳಿದೆ ಹೊರತಾಗಿ I am not inerfering in that. ಅದನ್ನು ಪೂರ್ವಭಾವಿಯಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈ ಹಿನ್ನೆಲೆಯಲ್ಲಿಯೇ ಅವರು ಪ್ರಸ್ತಾಪ ಮಾಡಿದ್ದೋ ಇಲ್ಲವೋ ನನಗೆ ಗೊತ್ತಾಗಲಿಲ್ಲ.

I was also just thinking about it. I dont know whether the Legislature Secretariat has received any amendment in respect of budget. If that has not been there then what type of discussion we should have? Or whether still Hon'ble Members have any right to participate or raise any discussion? It is a point.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಸಭಾಪತಿಗಳೇ, ನಾವು ಒಪ್ಪಿಕೊಳ್ಳುತ್ತೇವೆ. ನಾವು ಹೇಳಿರತಕ್ಕಂಥಾದ್ದನ್ನು It may be a lapse on the part of, we Members to send a Cut Motion.

Sri. K.H. Ranganath : It is misunderstood. I am not pointing out that. ಹೊಸದಾಗಿ ನಾವು ಒಂದು ಕಮಿಟಿ ಸಿಸ್ಟಂನ್ನು ಅಡಾಪ್ಟ್ ಮಾಡಿಕೊಂಡಿರುವುದರಿಂದ I am not pointing out any lapses on any Hon'ble Members.

ಶ್ರೀ ಪಿ.ಜಿ.ಆರ್.ಸಿಂಧ್ಯ : ನಾನು ತಮ್ಮಲ್ಲಿ ಒಂದು ಸಲಹೆ ಮಾಡುತ್ತೇನೆ. ಈ ಡಿಮ್ಯಾಂಡ್‌ಗಳು ಬಂದಾಗ ಈ ಡಿಮ್ಯಾಂಡ್‌ಗಳನ್ನು ನಮ್ಮ ಮಂತ್ರಿಗಳು ಇಂಟರ್‌ಡ್ಯೂಸ್ ಮಾಡಿದ್ದಾರಲ್ಲಾ ಆ ಇಂಟರ್‌ಡ್ಯೂಸ್ ಮಾಡುವುದಕ್ಕಿಂತ ಮುಂಚೆ ಆಯಾಯಾ ಕಮಿಟಿಗಳು ಮಾಡಿರತಕ್ಕಂಥ ರೆಕಮಂಡೇಷನ್ಸ್ ಮತ್ತು ಪೊಸೀಜರ್ಸ್‌ನ್ನು ಓದಿದ್ದಾರೆಯೇ ಇಲ್ಲವೇ ಎನ್ನುವುದರ ಬಗ್ಗೆ ನನಗೆ ಡೌಟ್ ಇದೆ. We assume that they have introduced.

ಶ್ರೀ ಕೆ.ಎಚ್.ರಂಗನಾಥ್ : ಡಿಮ್ಯಾಂಡ್‌ಗೆ ನಿಗಧಿಯಾಗಿರತಕ್ಕಂಥ ಹಣವನ್ನು ರಾಜ್ಯಪಾಲರ ಅಪ್ಪಣೆ ಪಡೆದು ತೆಗೆದುಕೊಳ್ಳತಕ್ಕಂಥಾದ್ದು ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ಇರತಕ್ಕಂಥ ಸಂಶಯ 54 ಜನ ಮಂತ್ರಿಗಳು ಏನು ಇದ್ದಾರೆ ಕಮಿಟಿಯವರು ಮಾಡಿರತಕ್ಕಂಥ ರೆಕಮೆಂಡೇಷನ್ಸ್; ಮತ್ತು ಮಾಡಿರತಕ್ಕಂಥ ಪ್ರೊಸಿಜರ್‌ನ್ನು ಓದಿಲ್ಲ ಎಂಬುದು ಅಭಿಪ್ರಾಯ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದಂತಹ ಸಿಂಧ್ಯಾರವರು ಹೇಳುತ್ತಿದ್ದಾರೆ ಸಮಿತಿಯ ವರದಿಗಳನ್ನು ಮಂತ್ರಿಗಳು ಓದಿದ್ದಾರೋ ಇಲ್ಲವೋ ಎಂದು ಆದರೆ ನಾವೆಲ್ಲಾ ಓದಿದ್ದೇವೆ. ಅಷ್ಟು ಬೇಜವಾಬ್ದಾರಿತನ ಇಲ್ಲ. ತಾವು ಏನೇನು ಸಲಹೆಗಳನ್ನು ನಾವು ಏನು ಮಾರ್ಪಾಟುಗಳನ್ನು ಮಾಡಬೇಕಾದರೆ ಎನ್ನುವುದನ್ನು ಓದಿದ್ದೇವೆ, ಓದಿಲ್ಲ ಎಂದು ಹೇಳಬೇಡಿ.

ಉಪಾಧ್ಯಕ್ಷರು :- ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಕಾಗೋಡು ತಿಮ್ಮಪ್ಪನವರು ಪ್ರಾಸ್ತಾವಿಕವಾಗಿ ಹೇಳಿದರು ಅದು ಏನೆಂದರೆ ವಿಷಯ ಸಮಿತಿ ಸದಸ್ಯರು

ಕೂಲಂಕಷವಾಗಿ ಚರ್ಚೆ ಮಾಡಿ ವರದಿಯನ್ನು ಒಪ್ಪಿಸಿದ್ದಾರೆ ಅಂತಹ ಸದಸ್ಯರು ಸಮಿತಿಯ ಸದಸ್ಯರಾಗಿದ್ದು ಕೊಂಡು ಮತ್ತೆ ಇಲ್ಲಿ ಬಂದು ಮಾತನಾಡುವ ಬದಲಾಗಿ ಅದೇ ಸದಸ್ಯರು ಬೇರೆ ಸಬ್ಜೆಕ್ಟ್ ಮೇಲೆ ಮಾತನಾಡಿ ಎಂದು ಹೇಳಿದರು. ಸನ್ಮಾನ್ಯ ಸಚಿವರಾದ ರಂಗನಾಥರವರು ಹೇಳಿದರು, ಮಾತನಾಡುವುದು ಸದಸ್ಯರ ಹಕ್ಕು ಅದನ್ನು ನಾವ್ಯಾರು ಕಿತ್ತುಕೊಳ್ಳುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಮಾತನಾಡಬೇಕೆಂದು ಇದ್ದರೆ ಕಟ್ ಮೋಷನ್ಸ್ ರೂಲ್ಸ್, 178 (ಬಿ) ಪ್ರಕಾರ ತಂದು ಮಾತನಾಡಬಹುದು ಎಂಬ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಮಾತನಾಡತಕ್ಕಂಥ ಸದಸ್ಯರು ತಾವು ಏನು ವಿಷಯ ಸಮಿತಿ ಸದಸ್ಯರಾಗಿದ್ದೀರಿ ಆ ಒಂದು ಭಾಗ ಬಿಟ್ಟು ಉಳಿದ ವಿಷಯದ ಬಗ್ಗೆ ಭಾಗವಹಿಸಿ ಬೆಳಕು ಚೆಲ್ಲಬೇಕೆಂದು ನಾನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಭಾಧ್ಯಕ್ಷರೇ, ಹಾಗಾದರೆ ನಾನು ಈಗ ಟ್ರಾನ್ಸ್‌ಪೋರ್ಟ್‌ನಲ್ಲಿ ಇಲ್ಲ. ಕಟ್ ಮೋಷನ್ಸ್ ಕಳುಹಿಸಿಲ್ಲ. ನಾನು ಮಾತನಾಡಬಹುದೇ? ಕಟ್ ಮೋಷನ್ಸ್ ಕಳುಹಿಸಿದರೆ ಮಾತ್ರ ಮಾತನಾಡಬೇಕೆಂದು ಹೇಳಿದರೆ ಹೇಗೆ?

ಉಪಾಧ್ಯಕ್ಷರು : ಯಾರು ಯಾವ ವಿಷಯ ಸಮಿತಿ ಸದಸ್ಯರಾಗಿಲ್ಲವೋ ಆ ಸಬ್ಜೆಕ್ಟ್ ಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಕಟ್ ಮೋಷನ್ಸ್ ಕಳುಹಿಸಲೇಬೇಕೆಂದು ಏನೂ ಇಲ್ಲ ನಿಯಮಾವಳಿಯಲ್ಲಿ ನಾವು ಪರ್ಟಿಕ್ಯುಲರ್ ವಿಚಾರವನ್ನು ಹೇಳಬೇಕೆಂದು ಅಂದಾಗ ಕಟ್‌ಮೋಷನ್ಸ್ ಕಳುಹಿಸಬೇಕು. ಆದರೆ ನಮ್ಮ ವಿಚಾರಗಳನ್ನು ಹೇಳಬೇಕೆಂದಾಗ ಅದು ಏನೂ ಇಲ್ಲ.

ಶ್ರೀ ಸಿ ಬೈರೇಗೌಡ :- ಮಾನ್ಯ ಲೋಕೋಪಯೋಗಿ ಸಚಿವರು ಏನು ಹೇಳಿದ್ದಾರೆ ಈ ಅನುಮಾನ ನಮ್ಮಲ್ಲಿ ಕೂಡ ಇದೆ. ನಾವು ಪ್ರಾರಂಭದಲ್ಲೂ ಇದನ್ನು ಪ್ರಸ್ತಾಪ ಮಾಡಿದ್ದೇವೆ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಏನು ಹೇಳುತ್ತಿದ್ದೇನೆಂದರೆ ಮಾನ್ಯ ಚಂದ್ರೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ವಿಷಯ ಸಮಿತಿಯಲ್ಲಿದ್ದರೂ ಕೂಡ ಅಲ್ಲಿ ಅದಕ್ಕೆ ಒಪ್ಪಿಗೆ ನೀಡಿ ಇಲ್ಲಿ ಅದನ್ನು ವಿರೋಧ ಮಾಡಬಹುದೇ? ಈ ಬಗ್ಗೆ ಕೂಡ ತಾವು ನಮಗೆ ಸೂಚನೆಯನ್ನು ಕೊಡಬೇಕೆನ್ನುವ ಮಾತನ್ನೂ ಸಹ ಹೇಳಿದ್ದೇವೆ. ವಿಷಯ ಸಮಿತಿಯಲ್ಲಿ ಸದಸ್ಯನಾಗಿದ್ದುಕೊಂಡು ಅದರ ವಿಚಾರವನ್ನು ಇಲ್ಲಿ ಮಾತನಾಡಬಹುದೇ? ವಿಷಯ ಸಮಿತಿ ಕೊಟ್ಟಂತಹ ವರದಿಗೆ ಒಪ್ಪಿಗೆ ನೀಡಿ ಇಲ್ಲಿ ಅದಕ್ಕೆ ವಿರುದ್ಧವಾಗಿ ಮಾತನಾಡಬಹುದೇ? ಆಮೇಲೆ ಜೊತೆಗೆ ಮಾನ್ಯ ಸಿಂಧ್ಯಾರವರು ಒಂದು ಮಾತನ್ನು ಹೇಳಿದರು. ವಿಷಯ ಸಮಿತಿಯಲ್ಲಿ ಒಂದು ವಿಚಾರ ಬಂದಂತಹ ಸಂದರ್ಭದಲ್ಲಿ ನಮ್ಮ ಅಭಿಪ್ರಾಯಗಳನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಸಮಿತಿಗಳಲ್ಲಿ ಕೆಲಸ ಮಾಡತಕ್ಕಂಥಾದ್ದು ಬೈ ಕಾನ್‌ಸೆನ್ಸ್. ಒಟ್ಟಾರೆ ಅಭಿಪ್ರಾಯ ಏನು ಬರುತ್ತದೆಯೋ ಆಗಬಹುದು ಅದರ ಪ್ರಕಾರ ಮಾಡಿ ಎಂದು ಹೇಳುವುದು ಒಂದು ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಸಾಮಾನ್ಯವಾಗಿ ಈ ಜಾಯಿಂಟ್ ಕಮಿಟಿಗಳು ಕೆಲವು ಬಿಟ್ಟರೆ ಉಳಿದಂತಹ ಕಮಿಟಿಗಳಲ್ಲಿ ಪಿಎಸಿ

ಕಮಿಟಿಗಳು ಆಗಲಿ ಎಸ್ಟಿಮೇಟ್ಸ್ ಕಮಿಟಿ ಆಗಲಿ ಅಥವಾ ಬೇರೆ ಕಮಿಟಿಗಳು ಆಗಲಿ ಸಾಮಾನ್ಯವಾಗಿ ಡಿಸೆಂಟಿಂಗ್ ನೋಟ್ ಇರುವುದಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿ ಬಿಲ್ ಮೇಲೆ ಕೊಡತಕ್ಕಂಥಾದ್ದು ಅದು ಬೇರೆ. ಆದರೆ ಈ ರೀತಿ ಇರತಕ್ಕಂಥ ಸಮಿತಿಗಳಲ್ಲಿ ಸಾಮಾನ್ಯವಾಗಿ ಇರುವುದಿಲ್ಲ. ಈಗ ಈ ಸಮಿತಿಗಳು ಕೂಡ 16-17 ಇವೆ. ಈ ಸಮಿತಿಗಳಲ್ಲಿಯೂ ಕೂಡ ಡಿಸಿಂಟಿಂಗ್ ನೋಟ್ ಇರುವುದಿಲ್ಲ. ನಮ್ಮ ಅಭಿಪ್ರಾಯ ಏನು ಇದೆ ಎನ್ನತಕ್ಕಂಥಾದ್ದನ್ನು ನಾವು ಅಲ್ಲಿ ಕಮಿಟಿಯಲ್ಲಿ ತಿಳಿಸಿದ್ದೇವೆ. ಇಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ ಇದೇ ವಿಷಯವನ್ನು ಅಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಹಣ ಸೋರಿ ಹೋಗುತ್ತಿದೆ ಮತ್ತೇ ಇದನ್ನು ಸರಿಯಾಗಿನೋಡಿಕೊಳ್ಳುತ್ತಿಲ್ಲ. ಸರ್ಕಾರಕ್ಕೆ ಬರಬೇಕಾದ ಹಣ ಬರುತ್ತಿಲ್ಲ ಎನ್ನತಕ್ಕಂಥ ಮಾತನ್ನೂ ಸಹ ಹೇಳಿದ್ದೇನೆ. ಆದರೆ ನಾವು ಅಲ್ಲಿ ಇರತಕ್ಕಂಥ ಒಂದು ಸಂಪ್ರದಾಯಕ್ಕೆ ಕಟ್ಟುಬಿದ್ದು ಒಪ್ಪಿಗೆ ಕೊಡುತ್ತೇವೆ. ಆದರೆ ವಿಷಯ ಮಾತ್ರ ಬೇರೆ ಇರುತ್ತದೆ. ಆ ದೃಷ್ಟಿಯಿಂದ ಇವತ್ತಿನ ದಿವಸ ನಾವು ಆ ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ನನಗಂತೂ ತೃಪ್ತಿ ಇಲ್ಲ ಎನ್ನುವುದನ್ನು ನಾನು ತಮ್ಮ ಮತ್ತು ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಉಪಾಧ್ಯಕ್ಷರು :- ಮಾನ್ಯ ಲೋಕೋಪಯೋಗಿ ಸಚಿವರು ಒಂದು ಮಾತು ಹೇಳಿದರು. ಹೌಸ್ ಆಫ್ ಕಾಮನ್ಸ್‌ನ್ನು ಸ್ವಲ್ಪ ಅಳವಡಿಸಿಕೊಂಡು ಈ ವಿಷಯ ಸಮಿತಿಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಆದರೂ ಅಲ್ಲಿ hard and fast rules ಏನೂ ಇಲ್ಲ. ವಿಷಯ ಸಮಿತಿ ಸದಸ್ಯರು ಮಾತನಾಡಲೇಬೇಕು ಅಥವಾ ಮಾತನಾಡಲೇಬಾರದು ಎಂದು ಏನೂ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್:- ನನಗೆ ಗೊತ್ತಿಲ್ಲ. ಮಾತನಾಡಬೇಕೋ ಬೇಡವೋ ಅಂತ ಆದರೂ ಕೂಡ ನಾವು ಇಲ್ಲಿ ಹೌಸ್ ಆಪ್ ಕಾಮನ್ಸ್‌ನ ನಡವಳಿಕೆಯನ್ನು ಇಲ್ಲಿ ಅಡಾಪ್ಟ್ ಮಾಡಿಕೊಂಡಿದ್ದೇವೆ. ಅಲ್ಲಿ ಏನು ಪ್ರೊಸೀಜರ್ ನಡೆಯುತ್ತದೆಯೋ ನನಗೆ ಗೊತ್ತಿಲ್ಲ ಅದಕ್ಕೆ ತಮ್ಮ ಅಧ್ಯಕ್ಷ ಪೀಠದಿಂದ ಬರಬೇಕು.

ಉಪಾಧ್ಯಕ್ಷರು : ಅದಕ್ಕೋಸ್ಕರವೇ 178(ಬಿ) ಇದೆ ಅದರ ಪ್ರಕಾರ ನಿಮಗೂ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ. ದಯಮಾಡಿ ಆ ರೀತಿ ಮಾತನಾಡಬೇಕೆನ್ನುವ ಇಚ್ಛೆ ಇರತಕ್ಕಂಥ ಮಾನ್ಯ ಸದಸ್ಯರು ಕಟ್ ಮೋಷನ್ಸ್ ಕಳುಹಿಸಿಕೊಟ್ಟರೆ ಮಾತನಾಡುವುದಕ್ಕೆ ಅವಕಾಶ ಇದೆ ಈಗ ಬೇರೆ ಸಮಿತಿಯ ವಿಷಯದ ಬಗ್ಗೆ ತಾವು ಚರ್ಚೆ ಮುಂದುವರಿಸಬಹುದು.

ಶ್ರೀ ಸಿ.ಭೈರೇಗೌಡ :- ಮಾನ್ಯ ಅಧ್ಯಕ್ಷರೇ, ಅದು ಪ್ರಾರಂಭ ಮಾಡಿಬಿಟ್ಟಿದ್ದೇನೆ. ಸ್ವಲ್ಪ ದೂರ ಮುಂದುವರಿದಿದ್ದು ಆಗಿದೆ, ಅದಕ್ಕೋಸ್ಕರ ಅದನ್ನು ಮುಂದುವರಿಸಲು ತಾವು ಅವಕಾಶ ಕೊಡುತ್ತೀರಾ ಎನ್ನುವ ನಂಬಿಕೆಯಿಂದ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಆದಾಯ ಎಷ್ಟು ಎನ್ನುವುದಕ್ಕೆ ಬೆಂಗಳೂರನ್ನೇ ಉದಾಹರಣೆ ಕೊಡುತ್ತಿದ್ದೆ. ಎಕ್ಸೈಜ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಇವತ್ತು ಇಲ್ಲಿ ಸುಮಾರು 6 ಕೋಟಿ ರೂಪಾಯಿ ಚಿಲ್ಲರೆಗೆ ಹರಾಜು ಆಗಿದೆ. ಹೊಸ ಕಂಟ್ರಾಕ್ಟರ್ಸ್ ಸಹ

ಬೆಂಗಳೂರು ನಗರ ಮತ್ತು ಗ್ರಾಮಾಂತರಕ್ಕೆ ಬಂದ ಹಾಗೆ ಮಾಡಿದ್ದಾರೆ. ನಾನು ಏತಕ್ಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈಗಾಗಲೇ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಹೊಸ ಹೊಸ ಪೈ-ಪೋಟಿಯನ್ನು ವ್ಯವಸ್ಥೆ ಮಾಡಬೇಕಾದರೆ ಸಾರಾಯಿಯನ್ನು ಚಿಲ್ಲರೆ ಮಾರಾಟ ಮಾಡತಕ್ಕಂಥ ಅಂಗಡಿಗಳು ಏನು ಇವೆ ಆ ಅಂಗಡಿಗಳನ್ನು ಸರ್ಕಾರ ವಶಪಡಿಸಿಕೊಳ್ಳತಕ್ಕಂಥ ಕೆಲಸ ಮಾಡಿ.

4.50 ಪಿ.ಎಂ.

ಅದರಿಂದ ಏನಾಗುತ್ತದೆ ಹೊಸದಾಗಿ ಬಂದ ಕಂಟ್ರಾಕ್ಟರ್‌ಗೆ ಅಂಗಡಿಗಳನ್ನು ಹುಡುಕುವಂತಹ, ವ್ಯಾಪಾರ ಕುದುರಿಸುವಂತಹ ಹೊಸ ಸಮಸ್ಯೆಗಳು ಬರುವುದಿಲ್ಲ ಎಂಬ ಸಲಹೆಗಳನ್ನು ಕೊಟ್ಟಿದ್ದೆ. ಅದನ್ನು ಮಾಡಲಿಲ್ಲ. ಈಗೇನಾಗಿದೆ ಬೆಂಗಳೂರಿನಲ್ಲಿ ಶೇಕಡ 50ರಷ್ಟು ಅಂಗಡಿಗಳಿಗೆ ಲೈಸೆನ್ಸ್ ಪಡೆದಿದ್ದರೂ ಸಹ ಅವು ಕೆಲಸ ಮಾಡುತ್ತಿಲ್ಲ ಏಕೆಂದರೆ ಹಿಂದೆ ಇದ್ದ ಕಂಟ್ರಾಕ್ಟರ್‌ಗಳು ಸುಮ್ಮನೆ ಆ ಅಂಗಡಿಗಳಿಗೆಲ್ಲಾ ಬೀಗ ಹಾಕಿಕೊಂಡು ಕುಳಿತಿದ್ದಾರೆ. ಏಕೆಂದರೆ, ಅವರವರ ಮಧ್ಯೆ ವ್ಯಾಪಾರದ ಪೈಪೋಟಿ ಇರುವ ಕಾರಣ ಹಳೆಯ ಕಂಟ್ರಾಕ್ಟರ್‌ಗಳು ಹೊಸ ಕಂಟ್ರಾಕ್ಟರ್‌ಗಳಿಗೆ ಅಂಗಡಿ ಕೊಟ್ಟಿಲ್ಲ. ಅದಕ್ಕಾಗಿಯೇ ನಾನು ಹೇಳುವುದೇನೆಂದರೆ ಸಾರಾಯಿ ಮಾರಾಟ ಕಡಿಮೆಯಾಗಿಲ್ಲ, ಸರ್ಕಾರವು ಬರುವ ಆದಾಯ ಕಡಿಮೆಯಾಗಿದೆ. ಬೆಂಗಳೂರಿನಲ್ಲೇ ಕಡಿಮೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಕೋಲಾರದಲ್ಲೂ ಸಾರಾಯಿ ಬಳಕೆ ಜಾಸ್ತಿ ಆಗಿದೆಯಲ್ಲಾ.

ಶ್ರೀ ಸಿ. ಭೈರೇಗೌಡ : ಇವತ್ತೇನಾಗಿದೆ ಎಂದರೆ ಬೀಡಿ ಸಿಗರೇಟ್ ಮಾರುವ ಅಂಗಡಿಗಳಲ್ಲೂ ಸ್ಯಾಚೆಟ್ ಸಿಗುತ್ತದೆ. ಮಲೆನಾಡು ಬಯಲು ಸೀಮೆ ಈಗ ಒಂದಕ್ಕೊಂದು ಪೈಪೋಟಿ ನಡಿಸುತ್ತಿವೆ. ನಾನು ಏನು ಹೇಳಿದ್ದೆ ಆ ಅಂಗಡಿಗಳನ್ನು ವಶಪಡಿಸಿಕೊಳ್ಳಿ. ಹೊಸದಾಗಿ ಬಂದ ಕಂಟ್ರಾಕ್ಟರ್ ಯಾರಿದ್ದಾರೆ ಅವರು ನೇರವಾಗಿ ಆ ಅಂಗಡಿಯಲ್ಲಿ ಮಾರಾಟ ಮಾಡುವುದಕ್ಕೆ ಸಹಾಯವಾಗುವ ತಮ್ಮ ಕಾನೂನಿನಲ್ಲಿ ತಿದ್ದುಪಡಿ ಮಾಡಿಕೊಳ್ಳಿ. ಆ ಸಲಹೆಯನ್ನು ಸರ್ಕಾರ ಒಪ್ಪಲಿಲ್ಲ. ಆ ಕಾರಣದಿಂದ ಇವತ್ತು ಕನ್‌ಸಂಪ್ಷನ್ ಕಡಿಮೆಯಾಗಿದೆ. ಆದ್ದರಿಂದ ಎಕ್ಸೈಜ್ ಡ್ಯೂಟಿ ಸೇಲ್ಸ್‌ಟ್ಯಾಕ್ಸ್ ಕಡಿಮೆಯಾಗಿದೆ, ಸರ್ಕಾರಕ್ಕೆ ಬರಬೇಕಾದ ಇನ್ನೂ ಕೆಲವು ಆದಾಯ ಕಡಿಮೆಯಾಗಿದೆ. ಇದರ ಲಾಭ ಯಾರು ಪಡೆಯುತ್ತಿದ್ದಾರೆ ಎಂದರೆ ಕಂಟ್ರಾಕ್ಟರ್ ಬೇರೆ ರೂಪದಲ್ಲಿ ಪಡೆಯುತ್ತಿದ್ದಾರೆ. ಬೇರೆಯವರು ಕಳ್ಳಸಾಗಣೆ ಮಾಡಿ ಸಾರಾಯಿಯನ್ನು ಇಲ್ಲಿ ಕುಡಿಯುತ್ತಿದ್ದಾರೆ. ಇದನ್ನು ಸರಿಪಡಿಸುವುದಕ್ಕೋಸ್ಕರ ವ್ಯವಸ್ಥೆ ಮಾಡಿ ಎಂದು ಹೇಳಿದ್ದನ್ನು ಮಾಡಲಿಲ್ಲ. ಹೋಗಲಿ, ಈಗಲೂ ಕೂಡ ಸರ್ಕಾರಕ್ಕೆ ಹೇಳಬಯಸುತ್ತೇನೆ, ಈ ವ್ಯವಸ್ಥೆಯನ್ನು ಮುಂದಿನ ವರ್ಷದಿಂದ ಜಾರಿಗೆ ತನ್ನಿ. ಅದರಿಂದ ಸರ್ಕಾರಕ್ಕೆ ಬರಬೇಕಾದ ಆದಾಯ ಏನಿದೆ ಆಗ ಬರುತ್ತದೆ. ಇದನ್ನು ದಯವಿಟ್ಟು ಜಾರಿಗೆತನ್ನಿ ಎಂದು ಹೇಳಲು ಇಷ್ಟಪಡುತ್ತೇನೆ. ಮತ್ತೆ ಇವತ್ತೇನಾಗಿದೆ ಎಂದರೆ ರಾಜ್ಯದಲ್ಲಿ ಖರ್ಚಾಗುವ ಸಾರಾಯಿಯ ಮೂರನೆಯ ಒಂದು ಭಾಗದಷ್ಟು ಬೆಂಗಳೂರಿನಲ್ಲೇ ಖರ್ಚಾಗುತ್ತದೆ. ಬೆಂಗಳೂರು ಸುತ್ತಲೂ ಇರುವ ತಾಲ್ಲೂಕುಗಳಲ್ಲಿ ಕಳ್ಳತನದಲ್ಲಿ

ಸಾರಾಯಿ ತಂದು ಮಾರಾಟ ಮಾಡುತ್ತಿದ್ದಾರೆ. ಅವರಿಂದ ಸರ್ಕಾರಕ್ಕೆ ಬರಬೇಕಾದ ಆದಾಯ ಯಾವುದೂ ಇಲ್ಲ. ಬೇರೆ ಕಡೆ ಕಳ್ಳತನದಲ್ಲಿ ಸಾರಾಯಿ ಮಾಡುತ್ತಾರೆ ಅದನ್ನು ಸ್ಯಾಚೆಟ್‌ನಲ್ಲಿ ತುಂಬಿಸುತ್ತಾರೆ ಇಲ್ಲಿ ಬೆಂಗಳೂರಿನಲ್ಲಿ ತಂದು ಮಾರುತ್ತಿದ್ದಾರೆ. ಇವರಿಂದ ಸರ್ಕಾರಕ್ಕೆ ಬರಬೇಕಾದ ಆದಾಯ ನಷ್ಟವಾಗುತ್ತದೆ, ಇದರಿಂದೇನಾಗಿದೆ ಎಂದರೆ ಬೆಂಗಳೂರಿನಲ್ಲಿರುವ ಕಂಟ್ರಾಕ್ಟರ್‌ಗಳಷ್ಟೇ ಅಲ್ಲ ರಾಜ್ಯದ ಅನೇಕ ಕಂಟ್ರಾಕ್ಟರುಗಳು ಕಿಸ್ತನ್ನು ಸರಿಯಾಗಿ ಕಟ್ಟಿಲ್ಲ; ಅದರ ಅಂಕಿ ಅಂಶ ಕೂಡ ಬೇಕಾಗುತ್ತದೆ. ಬೆಂಗಳೂರಿನಲ್ಲಿ ಬಳಕೆ ಎಷ್ಟಾಗುತ್ತಿದೆ, ಪ್ರತಿ ಐದನೇ ಹತ್ತನೇ ತಾರೀಖು ಕಿಸ್ತು ಕೊಡಬೇಕೆಂದು ಇದೆ, ಅಡ್ವಾನ್ಸ್ ಆಗಿಯೇ ಕೊಡಬೇಕು ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ಕೊಡಬೇಕೆಂದು ಇದೆ. ಅದರ ಜೊತೆಗೆ ಕ್ಯಾಷ್ ಡಿಪಾಸಿಟ್ ಕೊಡಬೇಕೆಂದು ಇದೆ. ಆದರೆ ಇದು ರಾಜ್ಯಾದ್ಯಂತ ನಡೆದಿಲ್ಲ. ಸರ್ಕಾರಕ್ಕೆ ಇದರಿಂದ ಈ ವರ್ಷ ನನ್ನ ಅಂದಾಜಿನಲ್ಲಿ 100 ಕೋಟಿಗಿಂತ ಕಡಿಮೆಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ರೂಲ್ಸ್ ಪ್ರಕಾರ ವೆಯಲೇಟ್ ಮಾಡಿದ್ದರೆ ಯಾರು ಮಾಡಿರುತ್ತಾರೆಂಬ ವಿಚಾರವನ್ನು ವಿಷಯದ ಸಮಿತಿಯಲ್ಲಿ ಕೇಳಿ ಚರ್ಚಿಸಲು ತಮಗೆ ಅವಕಾಶ ಇದೆ. ಒಂದು ವೇಳೆ ಅಲ್ಲಿ ನಿರಾಕರಣೆ ಮಾಡಿದ್ದರೆ ಮತ್ತೆ ಅಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇತ್ತು. ಆ ನಿರಾಕರಣೆ ಮಾಡಿದ್ದಾರೆ ಎನ್ನುವುದಕ್ಕೆ ಈ ವರದಿಯಲ್ಲಿ ಪ್ರಸ್ತಾಪ ಇಲ್ಲ. ನೀವು ಅಪೇಕ್ಷಿಸಿದ ಎಲ್ಲ ಮಾಹಿತಿ ಅಲ್ಲಿ ಸಿಕ್ಕಿರುವ ಕಾರಣ ಇಲ್ಲಿ ನೀವು ಹೇಳುತ್ತಿರುವುದು ಹೊಸದೇನಲ್ಲ ಮತ್ತೇ ಅದೇ 'ವಿಚಾರವನ್ನು ಚರ್ಚೆ ಮಾಡಿದರೆ ಏನರ್ಥ?

ಶ್ರೀ ಸಿ. ಭೈರೇಗೌಡ : ಏನೇನು ನಡೆದಿದೆ ಎಂಬ ಒಂದು ಪ್ರಶ್ನಾವಳಿ ಇಲಾಖೆಗೆ ಕಳಿಸಿದ್ದೆವು, ಅದಕ್ಕೆ ಉತ್ತರ ಇನ್ನೂ ಬಂದಿಲ್ಲ. ಈ ವಿಚಾರ ಅಲ್ಲಿ ಚರ್ಚೆಯಾಗಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಉಪಾಧ್ಯಕ್ಷರೇ, ವಿಷಯ ಸಮಿತಿಗಳ ಮೂಲಕ ನಾವೊಂದು ವರದಿ ಸರ್ಕಾರಕ್ಕೆ ಕೊಟ್ಟಿದ್ದೇವೆ. ಸನದಲ್ಲಿ ಮಂಡಿಸುವುದು ಅವನ್ನೇ ಹೊರತು ಅವನ್ನು ವೋಟಿಗೆ ಹಾಕುತ್ತಿಲ್ಲ. ಸರ್ಕಾರದಿಂದ ಏನು ತೀರ್ಮಾನ ಮಾಡಿಕೊಂಡಿದ್ದಾರೆ, ರಾಜ್ಯಪಾಲರಿಂದ ಏನು ಅಪ್ರೂವಲ್ ತೆಗೆದುಕೊಂಡಿದ್ದೀರಿ ಅವನ್ನು ಮಾತ್ರ ವೋಟಿಗೆ ಹಾಕುತ್ತಿದ್ದೀರಿ. ಆದ್ದರಿಂದ ಇದನ್ನೆಲ್ಲಾ ಹೇಳುವುದಕ್ಕೆ ನಮಗೆ ಏಕೆ ಅವಕಾಶ ಇಲ್ಲ? ನಾವು ಹೇಳಿದ್ದೇವೆ 100 ಕೋಟಿ ರೂ ಹೆಚ್ಚುವರಿ ಕೊಡಬೇಕೆಂದು. ನಮ್ಮ ಕಮಿಟಿ ಚೇರ್ಮನ್ ಶ್ರೀ ನರಸಿಂಹಮೂರ್ತಿಯವರು ಬಹಳ ಲಿಬರಲ್, 180 ಕೋಟಿ ಸೋಷಿಯಲ್ ವೆಲ್‌ಫೇರ್‌ಗಿದ್ದರೆ ಏಕೆ 180 ಕೋಟಿ ರೂ. 250 ಕೋಟಿ ರೂ. ಬರೆಯಿರಿ ಎಂದು ಬರೆದಿದ್ದಾರೆ. ಅದನ್ನು ನೀವು ವೋಟಿಗೆ ಇಡುತ್ತಿದ್ದೀರೋ? ಅದನ್ನು ಇಡುತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್ : ಡಿಮಾಂಡ್ ಪ್ರಮಾಣವನ್ನು ಹೆಚ್ಚಾಗಿ ಕೇಳುವುದಕ್ಕೆ ತಮಗೆ ಅಧಿಕಾರವೇ ಇಲ್ಲವಲ್ಲಾ ನಾನು ಪ್ರಸ್ತಾಪ ಮಾಡಿದಾಗ ಅದು ಮಾನ್ಯ ಸದಸ್ಯರಿಗೆ ಗೊತ್ತಾಯಿತೋ ಇಲ್ಲವೋ ಎಂದೆ ಆಗಲೇ. That is why, my point is that the responsibility/cast on us under Rule

178(a), (b), and (c) is more relevant. ಪಾಲಿಸಿ ಬದಲಾವಣೆ ಮಾಡುವುದಕ್ಕೆ ನಿಮ್ಮ ಕಮಿಟಿಗೆ ಅಧಿಕಾರ ಇಲ್ಲ. ಪಾಲಿಸಿ ಬದಲಾವಣೆ ಆಗಬೇಕು ಎಂದು ಹೇಳುವುದಾದರೆ to raise that discussion here, you will have to move. Any Hon'ble Member will have to move. ಎಂದು ನಾನು ಹೇಳಿದೆ.

SRI. P.G.R. SINDHIA : Please take out page 29. Page 29 says, the function of the each of the Subject Committee shall be to consider the Demands for Grants of the concerned department and make a report. The report shall not suggest anything of the nature of the outmotions ಎಂದು ಇದೆ.

SRI. K.H. RANGANATH : Basically what are the norms to be observed in the Committee? You cannot suggest any increase in the Demand at all. ಫಂಕ್ಷನ್ಸ್ ಆಫ್ ದಿ ಸಬ್ ಕಮಿಟಿ ಎಂದು ಹೇಳುವಾಗ ಒಂದು ನಾರ್ಮ್ಸನ್ನು ಕಮಿಟಿಗೆ ಕೊಟ್ಟಿದ್ದಾರೆ. ಅದೇನು? ಆ ನಾರ್ಮ್ಸ್ ಏನು ಎಂದರೆ You cannot increase any Demand at all. ಅಲ್ಲಿ 150 ಕೋಟಿ ರೂಪಾಯಿ ಇದ್ದುದ್ದನ್ನು any suggestions will have to be only within that. But in the opposition, they have got a right to criticise the whole policy. Therefore, my point under Rule 178 becomes more relevant now. Suppose, for argument sake, if you have sent a cut motion, not agreeing for the whole policy, then you would have every right to raise a discussion on that.

ಅದೇನು ಆಗುತ್ತದೆ? ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಇನ್ಸಿಡೆಂಟಲಿ ಹೇಳಿದಿರಿ. ಇಲ್ಲ ನಾವು 150 ಕೋಟಿ ರೂಪಾಯಿ ಅಲ್ಲ, 250 ಕೋಟಿ ರೂಪಾಯಿಗೆ ಡಿಮ್ಯಾಂಡ್‌ಗೆ ರೆಕ್ಮಂಡ್ ಮಾಡಿದ್ದೇವೆ ಎಂದು

ಶ್ರೀ ಪಿ.ಜಿ. ಆರ್.ಸಿಂಧ್ಯ : ಮಾಡಿದ್ದೇವೆ.

ಶ್ರೀ ಕೆ.ಹೆಚ್.ರಂಗನಾಥ್ : ನೀವು ರೆಕ್ಮಂಡ್ ಮಾಡಿದ್ದೀರಿ. ಈಗ ಇಂತಹ ಒಂದು ಹಿನ್ನೆಲೆಯಲ್ಲಿ Being a member of the Committee, being a party for the decision, again raising the issue here, either raising a particular issue which you should have done it under a cut motion sent under Rule 178(c) or (a) disagreeing the whole policy 9(b) or economic measure under (b) ಅದನ್ನು ನೀವು ಮಾಡದೇ, ಅದಕ್ಕೆ ಒಪ್ಪಿ ಈಗ ಅದು ಹಾಗೆ ಆಯಿತು, ಹೀಗೆ ಆಯಿತು ಎನ್ನುವುದು ಹೇಗೆ ಸರಿ ಹೋಗುತ್ತದೆ? ಬಹಳ ಮಟ್ಟಿಗೆ ಯಾರು

ಪ್ರಸ್ತಾಪ ಮಾಡಬಹುದು ಎಂದು ನನಗೆ ಅನಿಸುತ್ತದೆ ಎಂದರೆ ತಮ್ಮ ಪಾರ್ಟಿ ಸದಸ್ಯರು ಯಾರು ಕಮಿಟಿಯಲ್ಲಿ ಸದಸ್ಯರಾಗಿಲ್ಲ, ಆ ಒಂದು 'ಡಿಮ್ಯಾಂಡಿಗೆ ಸಂಬಂಧಪಟ್ಟಂತೆ ಆಗಿಲ್ಲ they can do it. ನಾನು ಅದಕ್ಕೆ ಹೇಳಿದೆ. ತಮ್ಮಿಂದ ಸ್ವಲ್ಪ ಸ್ಪಷ್ಟ ಮಾರ್ಗದರ್ಶನ ಬಂದರೆ ಬಹಳ ಮಟ್ಟಿಗೆ ಡೀಟೇಲ್ ಡಿಸ್ಕಷನ್ಸ್‌ಗೆ ಸಹಾಯ ಆಗುತ್ತದೆ. ಕಮಿಟಿ ಸಿಸ್ಟಂ ಇರತಕ್ಕದ್ದು ಹೌಸ್ ಆಫ್ ಕಾಮ್ಸ್‌ನಲ್ಲಿ ಇದು ಮೊದಲನೇ ಸಾರಿಗೆ ನಮ್ಮಲ್ಲಿ ಜಾರಿಗೆ ಬಂದಿದೆ. I don't know also, how it went on in Loka sabha. ಅಲ್ಲೂ ಕೂಡ ಇದು ಮೊದಲನೇ ಸಾರಿ ಬಂದಿರುವುದು. ನಮ್ಮ ಹಾಗೆ ಅವರೂ ಅವಸರವಾಗಿ ಪಾಸ್ ಮಾಡಿಕೊಂಡು ಹೋಗಿದ್ದರೆ ಅದಕ್ಕೆ ನಾವೇನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಲೋಕ ಸಭಾ ಸದಸ್ಯರನ್ನು ಎಲ್ಲಾ ಸಮಿತಿ ಅಧ್ಯಕ್ಷರು ಭೇಟಿ ಮಾಡಿದಾಗ ಆ ಸಮಿತಿಯ ವ್ಯವಸ್ಥೆ ಚೆನ್ನಾಗಿ ನಡೆದಿದೆ ಎಂದು ಹೇಳಿದರು.

ಶ್ರೀ ಕೆ.ಎಚ್. ರಂಗನಾಥ್ : ಸಮಿತಿ ವ್ಯವಸ್ಥೆ ಇಲ್ಲಿಯಾಯೂ ಸಹ ನಡೆದಿದೆ. ನನ್ನ ಪ್ರಶ್ನೆ ಏನೆಂದರೆ ತಾವು ಇರಲಿಲ್ಲ. ಮಾನ್ಯ ಭೈರೇಗೌಡರು ಹಾಗೂ ಚಂದ್ರೇಗೌಡರು ಪ್ರಸ್ತಾಪ ಮಾಡಿದರು. ನಾವು ಸಮಿತಿಯ ಸದಸ್ಯರಾಗಿ ಕೆಲವು ಪಾಲಿಸಿ ಮ್ಯಾಟರನ್ನು ಅಥವಾ ಎಕಾನಮಿ ಮೆಷರ್ಸ್ ಬಗ್ಗೆ ಏನಾದರೂ ವಿಷಯವನ್ನು ಪ್ರಸ್ತಾಪ ಮಾಡುವಾಗ ಅದು ಆಗದೇ ಹೋದರೆ ನಾವು ಇಲ್ಲಿ ಭಾಗವಹಿಸಬಹುದೇ ಅಥವಾ ಭಾಗವಹಿಸಬಾರದೇ ಎಂದು ಪ್ರಸ್ತಾಪ ಮಾಡುತ್ತಿದ್ದರು. ಮಾನ್ಯ ಭೈರೇಗೌಡರು ಈಗ ಅಂಗಡಿಗಳಿಗೆ ಸಂಬಂಧಪಟ್ಟಂತೆ the whole policy was not agreed here.

ಅದಕ್ಕೋಸ್ಕರ ಅಲ್ಲಿ ಆ ಒಂದು ತೀರ್ಮಾನಕ್ಕೆ ಭಾಗಿ ಆಗಿ ಮತ್ತೆ ಅದನ್ನು ಪ್ರಸ್ತಾಪ ಮಾಡತಕ್ಕದ್ದು ಅದು ಕಾನೂನು ಪ್ರಕಾರ ಸರಿ ಹೋಗಲಾರದು. ಒಂದು ವೇಳೆ ಕಟ್ ಮೋಷನ್ಸ್ ರೂಲ್ 178ರ ಪ್ರಕಾರ (ಎ) ನಲ್ಲೋ (ಬಿ)ನಲ್ಲೋ ಅಥವಾ (ಸಿ) ನಲ್ಲೋ ಕಳುಹಿಸಿದ್ದರೆ he would have led the opportunity ಎಂದು ಹೇಳಿದೆ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಭೈರೇಗೌಡರು ಬ್ಯಾಂಕ್ ಗ್ಯಾರಂಟಿ ಸರಿಯಾಗಿ ಕೊಡುತ್ತಾ ಇಲ್ಲ ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅವರ ಗಮನಕ್ಕೆ ಒಂದು ವಿಷಯ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಈಗ 117 ಕೋಟಿ ರೂಪಾಯಿ ಏನು ಬ್ಯಾಂಕ್ ಗ್ಯಾರಂಟಿ ಕೊಡಬೇಕಾಗಿತ್ತು, ಈಗಾಗಲೇ ನಾವು ಅದರಲ್ಲಿ ಸಾಮಾನ್ಯವಾಗಿ 106 ಕೋಟಿಗಳಷ್ಟು ಬ್ಯಾಂಕ್ ಗ್ಯಾರಂಟಿ, ಪಡೆದಿದ್ದೇವೆ. ಉಳಿಕೆಯನ್ನು ಆದಷ್ಟು ಶೀಘ್ರದಲ್ಲಿ ಬ್ಯಾಂಕ್ ಗ್ಯಾರಂಟಿ ಪಡೆಯುತ್ತೇವೆ. ಜೊತೆಯಲ್ಲಿ ಒಂದು ಮಾತನ್ನು ಸನ್ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಕಳೆದ ಸಾಲು ಅಂದರೆ 1993-94ನೇ ಸಾಲಿನಲ್ಲಿ ನೂರು ಗುತ್ತಿಗೆಯನ್ನು ನಾವು ರದ್ದುಮಾಡಿದಂತಹ ಉದಾಹರಣೆಗಳು ಇವೆ. ಏಕೆಂದು ಹೇಳಿದರೆ ಸರಿಯಾಗಿ ರೆಂಟಲ್ ಪಾವತಿ ಮಾಡದ ಕಾರಣಕ್ಕಾಗಿ. ಈ ವಿಚಾರವನ್ನು ಕೂಡ ಸನ್ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಧ್ಯದಲ್ಲಿಯೇ ಮಾನ್ಯ ಮಂತ್ರಿಗಳು ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಾದಂತಹ ರಂಗನಾಥ್ ಅವರಲ್ಲಿ ವಿನಂತಿಸಿಕೊಳ್ಳತಕ್ಕದ್ದು ಏನೆಂದರೆ ವಿಷಯ ಸಮಿತಿಯ ಸಭೆಯಲ್ಲಿ ಅದು ಸೀಮಿತವಾದಂಥ ಒಂದು ಚರ್ಚೆ ನಡೆದಿದೆ. ಸೀಮಿತ ಎಲ್ಲಿಗೆ ಎಂದರೆ ಸರ್ಕಾರದ ಇಲಾಖೆಯ ಸಂಬಳ ಸಾರಿಗೆ ಮತ್ತು ಇತರೆ ಬಾಬಿಗೆ ಎಷ್ಟು ಹಣ ಖರ್ಚು ಆಗಬೇಕಾಗಿತ್ತೋ ಆ ವಿಚಾರದಲ್ಲಿ ಮಾತ್ರ ನಾವು ವರದಿಯನ್ನು ಇವತ್ತಿನ ದಿವಸ ಕೊಟ್ಟಿರತಕ್ಕದ್ದು. ಆದರೆ ಒಟ್ಟಾರೆ ಆದಾಯ ಎಷ್ಟು ಬರಬೇಕಾಗಿದೆ, ಆ ಆದಾಯದ ಬಗ್ಗೆ ನಾವು ಸಮಿತಿಯಲ್ಲಿ ಚರ್ಚೆ ಮಾಡಿಲ್ಲ. ಎಲ್ಲಿ ಹಣ ಸೋರುತ್ತಿದೆ, ಏನಾಗುತ್ತಿದೆ ಎನ್ನುವ ಬಗ್ಗೆ ವಿಷಯ ಸಮಿತಿಯಲ್ಲಿ ಚರ್ಚೆಗೆ ಬಂದಿಲ್ಲ. ಆದ ಕಾರಣದಿಂದ ನಾನು ಇವತ್ತಿನ ದಿವಸ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ತಾವು ವರದಿಯನ್ನು ನೋಡಿದರೂ ಸಹ ಕೊನೆಯ ಪುಟ್ಟದಲ್ಲಿ ಅಬಕಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೇ ಪುಟದ ವರದಿ ಇದೆ ಇವತ್ತಿನ ದಿವಸ. ಅದೇನೆಂದರೆ ಬೇಡಿಕೆ ಇಷ್ಟು ಇದೆ. ಇಷ್ಟು ಹಣ ಬೇಕಾಗುತ್ತದೆ ಎನ್ನತಕ್ಕದ್ದನ್ನು ಒಪ್ಪಿರತಕ್ಕದ್ದು. ನಮ್ಮದು ಒಂದೋ ಎರಡೋ ಸಲಹೆಗಳು ಇದ್ದಾವೆ. ಅಷ್ಟು ಇಟ್ಟರೆ ನಾವು ಇಲಾಖೆಯು ಯಾವ ರೀತಿ ಕೆಲಸ ಮಾಡುತ್ತಿದೆ, ಇಲಾಖೆಯಲ್ಲಿ ಯಾವ ರೀತಿ ಹಣ ಸೋರಿಕೆ ಆಗುತ್ತಾ ಇದೆ ಎನ್ನತಕ್ಕದ್ದನ್ನು, ಆ ವಿಷಯ ಸಮಿತಿಯಲ್ಲಿ ಇನ್ನೂ ಕೂಡ ಪರಿಶೀಲನೆ ನಡೆಸಿಲ್ಲ. ಸಮಯದ ಅಭಾವದಿಂದ ನಾವು ನಡೆಸಿಲ್ಲ ಎನ್ನುವುದನ್ನು ನಾನು ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, ಮಾನ್ಯ ಮಂತ್ರಿಗಳು ನಾನು ಹೇಳಿದನ್ನೆಲ್ಲಾ ಕೇಳಿ ಉತ್ತರ ಕೊಟ್ಟಿದ್ದರೆ ಚೆನ್ನಾಗಿತ್ತು ಮಧ್ಯದಲ್ಲಿ. ನಾನೇನು ಹೇಳುತ್ತಿದ್ದೆ ಎಂದರೆ ಬ್ಯಾಂಕ್ ಗ್ಯಾರಂಟಿ ಕೊಟಿಲ್ಲ. ಕಿಸ್ತು ಸಹ ಕೊಟ್ಟಿಲ್ಲ. ಕಿಸ್ತು ಸಹ ಏನು ಕೊಡಬೇಕಾಗಿತ್ತು ಅದನ್ನು ಸರಿಯಾದ ರೀತಿಯಲ್ಲಿ ಇಲ್ಲಿಯವರೆಗೆ ಪಾವತಿ ಆಗಿಲ್ಲ. ಇವೆಲ್ಲವೂ ಕೂಡ ಕಾನೂನಿಗೆ ವಿರುದ್ಧ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು, ಅವರ ಭಾಷಣವನ್ನು ಪೂರ್ಣ ಕೇಳಿ ನಂತರ ಉತ್ತರ ಕೊಡಿ.

ಶ್ರೀ ರಮಾನಾಥ ರೈ : ಎರಡು ತಿಂಗಳು ಮೂರು ದಿವಸದ ಎಂದು ಹಿಂದೆ ಬ್ಯಾಂಕ್ ಗ್ಯಾರಂಟಿ ಕಟ್ಟಬೇಕಾಗಿತ್ತು. ನಾವು ಅದನ್ನು ಮೂರು ತಿಂಗಳು ಮೂರು ದಿವಸ ಎಂದು ಸರಿ ಮಾಡಿದ್ದೇವೆ. ಅದರಲ್ಲಿ ನಾವು ಬ್ಯಾಂಕ್ ಗ್ಯಾರಂಟಿಗಿಂತ ಜಾಸ್ತಿ ರೆಂಟಲ್ ಕಟ್ಟುವ ಬಾಕಿ ಇದ್ದ ಸನ್ನಿವೇಶ ಕಂಡಾಗ ನಾವು ಯಾವ ರೀತಿ ಗುತ್ತಿಗೆಯನ್ನು ರದ್ದುಮಾಡಿದ್ದೇವೆ ಅದೇ ರೀತಿಯಲ್ಲಿ ನಾವು ಈ ಸಾರಿ ರೆಂಟಲ್ ಸರಿಯಾಗಿ ಕಟ್ಟದೇ ಇದ್ದವರ ಲೈಸೆನ್ಸ್‌ರದ್ದು ಮಾಡಿದ್ದೇವೆ. ಆದ್ದರಿಂದಾಗಿ ಕಿಸ್ತು ಬರುವುದಕ್ಕೆ ಯಾವುದೇ ಸಮಸ್ಯೆ ಆಗುವುದಿಲ್ಲ. ಕಳೆದ ಸಾರಿ ನಾವು ಕಿಸ್ತು ಬಾಕಿ ವಸೂಲಿ ಮಾಡುವಲ್ಲಿ ಯಾವುದೇ ಮುಲಾಜಿಲ್ಲದೆ ವಸೂಲಿ ಮಾಡಲಿಕೆ ಅತಿ ಕಠಿಣವಾದ ಕ್ರಮವನ್ನು ನಾವು 1993-94ನೇ ಸಾಲಿನಲ್ಲಿ ಕೈಗೊಂಡಿದ್ದೇವೆ. ಈ ಸಾರಿ ಪ್ರಾರಂಭದಿಂದ ಕಠಿಣವಾದಂತಹ ಕ್ರಮವನ್ನು ಕೈಗೊಳ್ಳುವುದಕ್ಕೆ ಹೊರಟಿದ್ದೇವೆ. ಆದ್ದರಿಂದ ಕಿಸ್ತು ಯಾವುದೇ ರೀತಿಯಲ್ಲಿ ಬಾಕಿ ಆಗತಕ್ಕಂಥ ಸನ್ನಿವೇಶ ಇಲ್ಲ. ಅದರಲ್ಲೂ ಈ ವರ್ಷ ಅಂತಿಮ ದಿನಗಳಲ್ಲಿ ಬಾಕಿ ಇಲ್ಲ. ಸನ್ಮಾನ್ಯ ಸದಸ್ಯರಗಮನಕ್ಕೆ ತರುವುದಕ್ಕೆ ಬಯಸುತ್ತೇನೆ, ಈ ವರ್ಷ ಯಾವುದೇ ರೀತಿಯಲ್ಲಿ ಕಿಸ್ತು ಬಾಕಿ ಆಗದೆ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ.

ಶ್ರೀ ಸಿ. ಭೈರೇಗೌಡ : ಈ ಆರ್ಥಿಕ ವರ್ಷ ಮುಗಿಯುವವರೆಗೂ ಮಾನ್ಯ ರಮಾನಾಥ ರೈ ಅವರು ಎಲ್ಲಿ ಇರುತ್ತಾರೆ. ಏನು ಆಗಿರುತ್ತಾರೆ ಗೊತ್ತಿಲ್ಲ. ಇರಲಿ, ನೋಡೋಣ.

ಶ್ರೀ ರಮಾನಾಥ ರೈ : ನಾವು ಕಿಸ್ತು ಬಾಕಿ ಮಾಡಿದವರ ಗುತ್ತಿಗೆಯನ್ನು ರದ್ದು ಮಾಡುತ್ತೇವೆ. ಈ ವಿಚಾರದಲ್ಲಿ ಸನ್ಮಾನ್ಯ ಸದಸ್ಯರಿಗೆ ಮಾತನಾಡತಕ್ಕ ಅವಕಾಶ ಇಲ್ಲ. ಎಂದು ಸ್ಪಷ್ಟ ಹೇಳುವುದಕ್ಕೆ ಬಯಸುತ್ತೇನೆ ಮತ್ತು ಯಾವುದೇ ಒಂದು ಉದ್ದೇಶವಾಗಿ ಮಾತನಾಡಲಿಕ್ಕೆ ಒಂದು ಕಾರಣ ಬೇಕು. ಅದಕ್ಕೆ ಒಂದು ಅವಕಾಶ ಬೇಕು ಎನ್ನುವ ರೀತಿ ಮಾತನಾಡಬೇಕೇ ಹೊರತು, ಬೇರೆ ಯಾವುದೇ ರೀತಿಯಲ್ಲಿ ಇದಕ್ಕೆ ಆಸ್ಪದ ಇಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ : ನಾನು ಹೇಳದೇ ಇರುವುದನ್ನು ನನ್ನ ಹತ್ತಿರ ಹೇಳುತ್ತಿದ್ದಾರಲ್ಲ. ನಾನು ಹೇಳದೇ ಇರತಕ್ಕದ್ದನ್ನು ನನ್ನ ಬಾಯಿಗೆ ಏಕೆ ಹಾಕುವುದಕ್ಕೆ ಹೊರಟಿದ್ದಾರೆ. ನಾನು ಯಾವುದೋ ಉದ್ದೇಶದಿಂದ ಇದನ್ನು ಮಾಡುತ್ತಿದ್ದೇನೆ ಎಂದು. ನಾನು ಹೇಳಿರತಕ್ಕದ್ದು ಇವತ್ತು ಬ್ಯಾಂಕ್ ಗ್ಯಾಂರಟಿ ಕೊಟ್ಟಿಲ್ಲವೆಂದು ಹೇಳಿದ್ದೆ, ಹೌದು ಎಂದು ಅವರು ಒಪ್ಪಿದ್ದಾರೆ.

ಶ್ರೀ ರಮಾನಾಥ ರೈ : ಬ್ಯಾಂಕ್ ಗ್ಯಾರಂಟಿ ಇಲ್ಲದಿದ್ದರೂ ರೆಂಟಲ್ ಕಟ್ಟುತ್ತಿದ್ದಾರೆ.

ಉಪಾಧ್ಯಕ್ಷರು : ಅವರು ಪೂರ್ತಿ ಮಾತನಾಡಿದ ಮೇಲೆ ನೀವು ಕ್ಲಾರಿಫಿಕೇಷನ್ ಹೇಳಿ.

ಶ್ರೀ ಸಿ. ಭೈರೇಗೌಡ : ನಾನು ಹೇಳಿರತಕ್ಕದ್ದು ಇವತ್ತು ಪೂರ್ತಿಯಾಗಿ ಅವರೇ ಒಪ್ಪಿದ್ದಾರೆ. ಪೂರ್ತಿಯಾಗಿ ಇವತ್ತು ಬ್ಯಾಂಕ್ ಗ್ಯಾರಂಟಿ ಬಂದಿಲ್ಲ. ಅವರ ಪ್ರಕಾರವೇ 117 ಕೋಟಿ ರೂಪಾಯಿ ಬರಬೇಕಾಗಿರತಕ್ಕದ್ದು 94 ಕೋಟಿ ಎಷ್ಟೋ ಬಂದಿದೆ, ಉಳಿದಿರತಕ್ಕದ್ದು ಬಾಕಿ ಇದೆ. ನಾನೇನು ಅದನ್ನು ಬೇರೆ ಉದ್ದೇಶ ಇಟ್ಟುಕೊಂಡು ಹೇಳಲಿಲ್ಲ. ನಾನು ಹೇಳಿದ್ದನ್ನೇ ಇವತ್ತಿನ ದಿವಸ ಅವರೂ ಕೂಡಾ ಒಪ್ಪುತ್ತಿದ್ದಾರೆ. ಇದೇ ರೀತಿಯಲ್ಲಿ ಅನೇಕ ತಾಲ್ಲೂಕುಗಳಲ್ಲಿ ಮತ್ತು ಅನೇಕ ಪ್ರದೇಶಗಳಲ್ಲಿಯೂ ಕೂಡ ಕಿಸ್ತು ಎನ್ನತಕದ್ದು ಬಾಕಿ ಇದೆ, ಅದರ ವಿವರವನ್ನು ದಯವಿಟ್ಟು ಕೊಡಿ. ಇವತ್ತು ಏನೋ ಬಹಳ ವೀರಾವೇಶದಿಂದ ತಾವು ಹೇಳುತ್ತಿದ್ದೀರಿ. ಏನೆಂದು ಅಂದರೆ ಹೋದವರ್ಷ ನಾವು ಬಹಳ ಕಟ್ಟುನಿಟ್ಟಾಗಿ ವಸೂಲಿ ಮಾಡಿದ್ದೇವೆ ಎಂದು. ವಿವರವನ್ನು ಕೊಡಿ. ಹೋದವರ್ಷದ್ದು ಬಾಕಿ ಇಲ್ಲವೇ? ಎಷ್ಟು ಬರಬೇಕಾಗಿತ್ತು ? ಇದರ ವಿವರವನ್ನು ಕೊಡಿ. ತಾವು ಮರು ಹೂಜು ಮಾಡಿದ್ದೀರಿ, . ನಿಜ. ಆ ರೀತಿ ಮರು ಹರಾಜು ಮಾಡಿದ ಎಷ್ಟು ಕಡೆಗಳಲ್ಲಿ ನಷ್ಟವಾಗಿದೆ? ಇದರ ವಿವರವನ್ನೂ ಕೊಟ್ಟರೆ ಗೊತ್ತಾಗುತ್ತದೆ . ಏಕೆಂದರೆ, ನಾನು ಇದನ್ನು ನಿರ್ವಿಕಾರ ಮನೋಭಾವದಿಂದ ನೋಡುತ್ತಿದ್ದೇನೆ. ಇದಕ್ಕೆ ಕನ್‌ಸಪ್ಟ್ರಕ್ಟಿವ್ ಸಜೆಶನ್ ಕೊಡಬೇಕೆಂಬ ದೃಷ್ಟಿಯಿಂದ ಮಾತಾನಾಡುತ್ತಿದ್ದೇನೆ ವಿನಾ ಏನೋ ಲೋಪ

ಮಾಡಿದ್ದೀರೆಂದಲ್ಲ. ಲೋಪಗಳೂ ಇವೆ. ಇಲ್ಲವೆಂದು ಹೇಳುವುದಿಲ್ಲ . ಇದರ ಬಗ್ಗೆ ಅನಂತರ ಮಾತನಾಡುತ್ತೇನೆ. ಆದರೆ, ಇದನ್ನು ಕನ್‌ಸ್ಟ್ರಕ್ಟಿವ್ ಆಗಿ ಸರಿಪಡಿಸಬೇಕೆಂಬ ಬಗ್ಗೆ ಸೂಚನೆಗಳನ್ನು ಕೊಡುತ್ತಿದ್ದೇನೆ . ಆದುದರಿಂದ, ನಾನು ಹೇಳುವುದನ್ನು ಸಮಾಧಾನವಾಗಿ ಕೇಳಿ ನಂತರ ಉತ್ತರ ಕೊಡಿ . ಇವೊತ್ತು ಐ.ಎಂ.ಎಫ್.ಎಲ್. ಸಾರಾಯಿ ಆದನಂತರ ಹಾದಿಗೊಂದು ಬೀದಿಗೊಂದು ಡಿಸ್ಟಿಲರಿಗಳನ್ನು ಕೊಟ್ಟಿದ್ದಾರೆ. ಮೊದಲು 20-22 ಡಿಸ್ಟಲರಿಗಳಿದ್ದವು . ಕಳೆದ ನಾಲ್ಕು ಮುಕ್ಕಾಲು ವರ್ಷಗಳಲ್ಲಿ ರಾಜ್ಯಕ್ಕೆ ಕಾಂಗ್ರೆಸ್ ಸರ್ಕಾರದ ಕೊಡುಗೆ ಏನೆಂದರೆ 20-22 ಡಿಸ್ಟಲರಿಗಳಿದುದ್ದು ಇವೊತ್ತು 75ಕ್ಕೂ ಜಾಸ್ತಿ ಡಿಸ್ಟಿಲರಿಗಳಾಗಿವೆ. ಮತ್ತು ಈ ಡಿಸ್ಟಿಲರಿಗಳಲ್ಲಿ ಏನೇನು ಕೆಲಸ ನಡೆಯುತ್ತದೆಂಬುದೂ ಸರ್ಕಾರಕ್ಕೆ ಗೊತ್ತಿಲ್ಲ, ಇದರ ಬಗ್ಗೆ ಮಾಹಿತಿಯೂ ಇಲ್ಲ. ಇದಲ್ಲದೆ ಎಲ್ಲಾ ಕಡೆ. ಎಲ್ಲೆಂದರಲ್ಲಿ ಎನ್.ಡಿ.ಪಿ.ಎಲ್ (ನಾನ್ ಡ್ಯೂಟಿ ಪೈಡ್ ಲಿಕ್ಕರ್) ಯಥೇಚ್ಛವಾಗಿ ಸಿಗುತ್ತದೆ. ಇಲಾಖೆಯ ಭಾಷೆಯಲ್ಲಿ ಹೇಳುವುದಾದರೆ ಇದು ಎಲ್.ಡಿ.ಪಿ.ಎಲ್, ನಾವು-ನೀವು ಇದನ್ನು ಸೆಕೆಂಡ್ಸ್ ಎಂದು ಕರೆಯುತ್ತೇವೆ. ನಿಮಗೆ ಯಾವ ಡಿಸ್ಟಿಲರಿಗಳ ಮೇಲೆ ರೈಡ್ ಮಾಡಬೇಕೆಂದೆನಿಸಿತ್ತೋ ಅದರ ಮೇಲೆ ರೈಡ್ ಮಾಡಿದಿರಿ . ದಯವಿಟ್ಟು ಗಮನಿಸಬೇಕು. ಕೆಲವು ಡಿಸ್ಟಿಲರಿಗಳಮೇಲೆ ಕಾಂಪೌಂಡಿಂಗ್ ಚಾರ್ಜಸ್ ಹಾಕಿದ್ದರು. ತಮಗೆ ಬೇಕಾಗಿದ್ದಂಥ ಇನ್ನು ಕೆಲವು ಡಿಸ್ಟಿಲರಿಗಳ ಮೇಲೆ ಕಡಿಮೆ ಕಾಂಪೌಂಡಿಂಗ್ ಚಾರ್ಜಸ್ ಹಾಕಿದ್ದರು. ಇದಕ್ಕೇನು ಕಾರಣ? ಆದರೆ, ಇದೇ ಔದಾರ್ಯವನ್ನು ಇತರ ಡಿಸ್ಟಿಲರಿಗಳಿಗೆ ತೋರುವ ಮಟ್ಟಕ್ಕೆ ಹೋಗಲಿಲ್ಲ. ಇವೊತ್ತು ಕೂಡ ಅವ್ಯಾಹತವಾಗಿ ಸೆಕೆಂಡ್ಸ್ ನಡೆಯುತ್ತಿದೆ. ಇದನ್ನು ತಡೆಯುವಂಥ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಹಿಂದೆ ಕೆಲವು ಡಿಸ್ಟಿಲರಿಗಳಿಗೆ ಯಾವ ಪ್ರಮಾಣದಲ್ಲಿ ಲಿಕರ್ ಬರುತ್ತಿತ್ತೋ ಅದಕ್ಕಿಂತ ಹೆಚ್ಚಿಗೆ ಪ್ರಮಾಣದಲ್ಲಿ ಬರುತ್ತಿದ್ದು, ಅವ್ಯಾಹತವಾಗಿ ಸೆಕೆಂಡ್ಸ್ ನಡೆಯುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಯಾವಾವ್ಯ ಡಿಸ್ಟಿಲರಿಗಳ ಮೇಲೆ ರೇಡ್ ಮಾಡಿದ್ದೀರಿ? ಯಾವ್ಯಾವ ಡಿಸ್ಟಿಲರಿಗಳಿಗೆ ಎಷ್ಟೆಷ್ಟು ಕಾಂಪೌಂಡಿಂಗ್ ಚಾರ್ಜಸ್ ಹಾಕಿದ್ದೀರಿ? ನಂತರ ಎಷ್ಟು ಕಡಿಮೆ ಮಾಡಿದ್ದರಿ? ಕಡಿಮೆ ಮಾಡುವುದಕ್ಕೆ ಕಾರಣವೇನು? ಇದರ ಎಲ್ಲಾ ಲೆಕ್ಕವನ್ನು ಕೊಡಬೇಕಾಗುತ್ತದೆ. ನಿಮ್ಮ ಮನಸ್ಸಿಗೆ ಬಂದಂತೆ ಮಾಡುವುದಕ್ಕಾಗುವುದ್ದಿಲ್ಲ. ಏನೇ ಮಾಡಬೇಕಾದರೂ ಕೂಡ ನಿಯಮಾವಳಿಗಳನ್ನು ರಚಿಸಿಕೊಂಡಿದ್ದು ಅದರ ಪ್ರಕಾರ ಮಾಡಬೇಕಾಗುತ್ತದೆ. ಆದುದರಿಂದ. ಈ ಎಲ್ಲಾ ವಿಷಯಗಳ ಬಗ್ಗೆ ಅಂಕಿ-ಅಂಶ ಕೊಡಬೇಕಾಗುತ್ತದೆ. ಅಲ್ಲದೆ, ತಾವು ಎಷ್ಟು ಡಿಸ್ಟಿಲರಿಗಳನ್ನು ಮುಚ್ಚಿಸಿದ್ದೀರಿ? ಅಲ್ಲಿ ಕಂಡಂಥ ಲೋಪ-ದೋಷಗಳೇನು? ಇವೆಲ್ಲವನ್ನೂ ತಿಳಿಸಬೇಕಾಗುತ್ತದೆ. ಈ ವ್ಯವಹಾರ ಇಲಾಖೆಯವರಿಗೆ ಗೊತ್ತಿಲ್ಲದೆ ನಡೆಯುವುದಕ್ಕೆ ಸಾಧ್ಯವಿಲ್ಲ . ಗೊತ್ತಿದ್ದರೂ ಸಹ ಕೆಲವು ಡಿಸ್ಟಿಲರಿಗಳ ಮೇಲೆ ಕ್ರಮ ತೆಗದುಕೊಳ್ಳುತ್ತಾರೆ, ಕೆಲವರ ಮೇಲೆ ತೆಗೆದುಕೊಳ್ಳುವುದಿಲ್ಲ. ನಾನು ಈ ಬಗ್ಗೆ ಹೇಳುವುದೇನೆಂದರೆ , ಯಾರು ಈ ವ್ಯವಹಾರ, ದಂಧೆ ನಡೆಸುತ್ತಿದ್ದಾರೋ ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲೇಬೇಕೆಂಬ ಅಗ್ರಹವನ್ನು ಈ ಸಂಧರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಹೊರಗಡೆಯಿಂದ ಲೋಡ್‌ಗಟ್ಟಲೆ ರೆಕ್ಟಿಫೈಡ್ ಸ್ಪಿರಿಟ್ ಅದನ್ನು ತರಿಸುವಂಥ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತಿದೆ. ಬೋಗಸ್ ಪರ್ಮಿಟ್, ಅದಕ್ಕೆ ರಹದಾರಿಯೇ ಇಲ್ಲ. ಈ ಕಡೆಯಿಂದ ಆ ಕಡೆಗೆ ಸಾಗಣಿಕೆ ಮಾಡುವುದಕ್ಕೆ ರಹದಾರಿಯೇ ಇಲ್ಲ. ಅಂಥದ್ದು ಕೂಡ ಇವತ್ತು

ಸಾಗಾಣಿಕೆಯಾಗಿ ಯಥೇಚ್ಛವಾಗಿ ಇವತ್ತಿನ ದಿವಸ ಬರುತ್ತಿದೆ. ಇದನ್ನು ತಡೆಗಟ್ಟಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದು ಇಲಾಖೆಯವರಿಗೂ ಗೊತ್ತಿದೆ. ಇಲಾಖೆಗೆ ಗೊತ್ತಿಲ್ಲದೆ ಇದನ್ನು ಮಾಡುವುದಕ್ಕಾಗುವುದಿಲ್ಲ. ನಾನು ಈ ಕೆಲವು ವಿಚಾರಗಳನ್ನು ಮಾತ್ರ ಹೇಳಿದ್ದೇನೆ. ಏಕೆಂದರೆ ಹಿರಿಯ ಸದಸ್ಯರಾದ ರಂಗನಾಥ್‌ರವರನ್ನು ಕಾಡಿಸುತ್ತಿರತಕ್ಕ ಪ್ರಶ್ನೆ ನನ್ನನ್ನು ಸಹ ಕಾಡಿಸುತ್ತಿದೆ. ನಾನು ಈ ವಿಚಾರದಲ್ಲಿ ಮಾತನಾಡಿಸಬಹುದೆ? ಇಲ್ಲವೇ ಎನ್ನುವುದು ನನ್ನನ್ನು ಸಹ ಕಾಡಿಸುತ್ತಿದೆ. ಆದ್ದರಿಂದ ನಾವು ಸಮಿತಿಯ ಸಭೆಯಲ್ಲಿ ಏನನ್ನು ಮಾತಾನಾಡಿದ್ದೇವೆ ಅದನ್ನು ಬಿಟ್ಟು ಕೆಲವೇ ವಿಚಾರಗಳನ್ನು ನಾನು ಈ ಸಭೆಯ ಗಮನಕ್ಕೆ ಇವತ್ತಿನ ದಿವಸ ತಂದಿದ್ದೇನೆ. ಇದರ ಬಗ್ಗೆ ಸರ್ಕಾರ ವಿವರಣೆಯನ್ನು ಕೊಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಇನ್ನು ಮಾನ್ಯ ರಂಗನಾಥ್‌ರವರಿಗೆ ಸಂಬಂಧಪಡುವ ಇಲಾಖೆಯ ಬಗ್ಗೆ ಹೇಳುವುದಾದೆ, ಕಳೆದ ಸಾರಿ ತಾವು ಪೀಸ್ ವರ್ಕ್‌ನ್ನು ಅಬಾಲಿಷ್ ಮಾಡುತ್ತೇವೆಂದು ಹೇಳಿದ್ದಿರಿ. ಇಲಾಖೆಯ ಮೂಲಕ ನಾವು ಕೆಲಸಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೀರಿ. ಮತ್ತು ಎಲ್ಲವನ್ನೂ ಟೆಂಡರ್‌ಗೆ ಇಡುತ್ತೇವೆನ್ನತಕ್ಕ ಮಾತನ್ನು ಹೇಳಿದ್ದೀರಿ. ಈ ಕಡೆಯಿಂದ ಇದರಲ್ಲಿ ಬಹಳ ಅವ್ಯವ್ಯವಹಾರ ನಡೆಯುತ್ತದೆ ಇದನ್ನು ನಿಲ್ಲಿಸತಕ್ಕ ಕೆಲಸವನ್ನು ದಯವಿಟ್ಟು ಮಾಡಬೇಕೆಂದು ನಾವು ಸಹ ಅಗ್ರಹ ಮಾಡಿದ್ದೇವೆ. ಆವತ್ತಿನ ದಿವಸ ತಾವು ಕೂಡ ಅದನ್ನು ಒಪ್ಪಿದ್ದೀರಿ. ಆದರೆ ಇದು ಇವತ್ತಿನ ದಿವಸ ಎಷ್ಟರ ಮಟ್ಟಿಗೆ ಜಾರಿಯಾಗಿದೆ? ಅದರ ಬಗ್ಗೆ ತಾವುದಯವಿಟ್ಟು ಮಾಹಿತಿಯನ್ನು ಕೊಡಬೇಕು. ರಸ್ತೆಯ ಬಗ್ಗೆ ಹೇಳುವುದಾದರೆ. ತಾವು ನನ್ನ ಜೊತೆ ಬಂದರೆ ನಾನು ತಮಗೆ ಕರೆದುಕೊಂಡು ಹೋಗಿ ರಸ್ತೆಗಳನ್ನು ತೋರಿಸುತ್ತೇನೆ. ಅಧ್ಯಕ್ಷರೆ ಒಂದು ರಸ್ತೆಗೆ ಟಾರ್‌ನ್ನು ಹಾಕಿದರೆ ಅದು ಕನಿಷ್ಟ ಎಂಟು ವರ್ಷವಾದರೂ ಸಹ ಬಾಳಿಕೆ ಬರಬೇಕು. ಆದರೆ ಮೂರೇ ತಿಂಗಳಿನಲ್ಲಿ ನಾಶವಾಗಿರುವ ರಸ್ತೆಗಳನ್ನು ನಾನು ಕಣ್ಣಾರೆ ದಿನವೂ ಕಾಣುತ್ತಿದ್ದೇನೆ. ಬೆಂಗಳೂರು ಕಡಪಾ ರಸ್ತೆಯಲ್ಲಿ ನಾವು ವಾರಕ್ಕೆ ನಾಲ್ಕು ಸಾರಿ ಓಡಾಡಬೇಕು. ನನಗೆ ಆ ರಸ್ತೆಯಲ್ಲಿ ಓಡಾಡಬೇಕೆಂದರೆ ಬಹಳ ಸಿಟ್ಟು ಬರುತ್ತದೆ. ಅಷ್ಟು ಅವ್ಯವಸ್ಥೆಯಾಗಿದೆ. ದಯಮಾಡಿ ತಾವೇ ಬಂದು ಯಾವ ರೀತಿ ಕೆಲಸ ನಡೆಯುತ್ತಿದೆ ಎಂಬದನ್ನು ನೋಡಬೇಕು. ಮುಕ್ಕಾಲು ಅಂಗುಲ ಟಾರನ್ನು ಹಾಕಬೇಕಾಗಿದೆ, ಆದರೆ ಒಂದು ಕಡೆಯ ಮುಕ್ಕಾಲು ಅಂಗುಲ ಹಾಕಿಲ್ಲ. ತಾವು ದಯವಿಟ್ಟು ಆ ರಸ್ತೆಯನ್ನು ವಿಶೇಷವಾಗಿ ನೋಡಬೇಕು. ಬೇರೆ ರಸ್ತೆಗಳ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ನಮ್ಮ ಕಣ್ಣೆದುರಿಗೆಯೆ ಈ ರೀತಿ ನಡೆಯುತ್ತಿದ್ದರೆ ಅದನ್ನು ನೋಡಿಕೊಂಡು ನಾವು ಯಾವ ರೀತಿ ಸುಮ್ಮನೆ ಇರುವುದು? ನನ್ನ ಕ್ಷೇತ್ರಕ್ಕೆ ಹೋಗಬೇಕಾದರೆ ಅದೇ ರಸ್ತೆಯ ಮೂಲಕ ಹೋಗಬೇಕು. ಆ ರಸ್ತೆಯನ್ನು ಮಾಡಿ ಮೂರು ತಿಂಗಳೂ ಸಹ ಆಗಿಲ್ಲ ಆಗಲೇ ರಸ್ತೆ ಕಿತ್ತು ಬಂದಿದೆ. ಕೇವಲ ಮೂರೇ ಮೂರು ತಿಂಗಳಿನಲ್ಲಿ ಹಾಕಿರತಕ್ಕ ಟಾರು ಕಿತ್ತುಬರುತ್ತದೆಂದರೆ, ಅದನ್ನು ಗುತ್ತಿಗೆದಾರರು ಮೂಲಕ ಮಾಡಿಸಿದ್ದಾರೋ ಅಥವಾ ಇಲಾಖೆಯ ಮೂಲಕ ಮಾಡಿಸಿದ್ದಾರೋ ಗೊತ್ತಿಲ್ಲ. ತಾವು ಯಾವತ್ತು ಆ ರಸ್ತೆಯನ್ನು ನೋಡಲು ಬರುತ್ತೀರೆಂದರೆ ಅಂದು ನಾನುಇರುತ್ತೇನೆ. ತಾವು ದಯವಿಟ್ಟು ಆ ರಸ್ತೆಯನ್ನು ನೋಡಬೇಕು. ನನ್ನ ಜೊತೆಯಲ್ಲಿ ತಾವು ದಯವಿಟ್ಟು ಬರಬೇಕು. ಏಕೆ ಆ ರೀತಿ ಕೆಲಸವಾಗಿದೆ, ಅದಕ್ಕೆ

ಸಂಬಂಧಪಟ್ಟಿರತಕ್ಕ ಅಧಿಕಾರಿಗಳು ಯಾರು ಇದ್ದಾರೆ ಎನ್ನುವ ಬಗ್ಗೆ ನೀವೆ ಖುದ್ದಾಗಿ ಬಂದು ಪರಿಶೀಲನೆ ಮಾಡಿ.

ತಾವು ಈ ವ್ಯವಸ್ಥೆಯಲ್ಲಿ ಏನು ಬದಲಾವಣೆಯನ್ನು ಮಾಡುತ್ತೇವೆಂದು ಮಾತನ್ನು ಕೊಟ್ಟಿದ್ದಿರಿ ಆ ಬದಲಾವಣೆ ಇವತ್ತು ನಮಗೆ ಕಾಣುತ್ತಿಲ್ಲ. ವ್ಯವಸ್ಥೆಯಲ್ಲಿ ಬದಲಾವಣೆಯಾಗಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್ : ವ್ಯವಸ್ಥೆ ಬದಲಾವಣೆ ಮಾಡಿದ್ದಾರೆ. ಈಗ ಬಹುಪಾಲು ಕೆಲಸವನ್ನು ಟೆಂಡರ್ ಮೂಲಕ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲೋ ಅಲ್ಲಿ ಇಲ್ಲ, ಮತ್ತು ಮಾನ್ಯ ಸದಸ್ಯರು 5-10 ಲಕ್ಷದ ಬಗ್ಗೆ ಏನು ಹೇಳಿದ್ದಾರೆ ಅಲ್ಲಿ ಅದನ್ನು ಸ್ವಲ್ಪ ಸಡಿಲ ಮಾಡಿದ್ದೇವೆ. ಮತ್ತು ಟೆಂಡರ್ ಹಾಕಿ ಅದಕ್ಕೆ ಬಾರದ್ದಿದ್ದರೆ ಮತ್ತು ಕೆಲಸವು ಜಾಗ್ರತೆಯಾಗಿ ಆಗಬೇಕೆಂದಿದ್ದರೆ ಅಂಥ ಸಂದರ್ಭದಲ್ಲಿ ಮಾತ್ರ ಅನಿವಾರ್ಯವಾಗಿ ಬೇರೆ ಕಡೆಯಿಂದ ಮಾಡಿರುತ್ತಾರೆಯೇ ಟೆಂಡರ್ ಹಾಕತಕ್ಕದ್ದು ಈಗ ನೀತಿಯೇ ಆಗಿದೆ, ಅದರ ಪ್ರಕಾರ ಈಗ ಬಹುಪಾಲು ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದೀರಿ ಅದನ್ನು ನಾನು ನಿರಾಕರಣೆ ಮಾಡುವುದಿಲ್ಲ. ಮತ್ತು ತಾವೇನು ಬೆಂಗಳೂರು ಕಡಪಾ ರಸ್ತೆಯ ಬಗ್ಗೆ ಹೇಳಿದ್ದೀರಿ ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ : ಈ ರಸ್ತೆಯನ್ನು ಮಾತ್ರ ತಾವೇ ದಯವಿಟ್ಟು ಬಂದು ನೋಡಬೇಕು. ಏಕೆಂದರೆ ನಾನು ದಿನನಿತ್ಯ ಆ ರಸ್ತೆಯಲ್ಲಿ ಓಡಾಡುತ್ತಿರಬೇಕಾದರೆ ಅದನ್ನು ಕಣ್ಣಿನಲ್ಲಿ ನೋಡಲಾಗುವುದಿಲ್ಲ. ಅಲ್ಲಿ ನಡೆಯುತ್ತಿರುವ ಕಳಪೆ ಕೆಲಸವನ್ನು ನಾವು ಕಣ್ಣಿನಿಂದ ನೋಡಲಾಗುವುದಿಲ್ಲ. ದಯವಿಟ್ಟು ತಾವು ನನ್ನ ಆ ಬೇಡಿಕೆಯನ್ನು ಒಪ್ಪಿಕೊಂಡು ಆ ರಸ್ತೆಯನ್ನು ನೋಡಲು ಬರಲೇ ಬೇಕು. ನನ್ನ ಕಣ್ಣೆದುರಿಗೆಯ ಆ ರೀತಿ ಕೆಲಸ ನಡೆಯುತ್ತಿದ್ದರೆ ಅದನ್ನು ನೋಡಿಕೊಂಡು ಸುಮ್ಮನಿರಲು ನನ್ನಿಂದ ಅಂತೂ ಸಾಧ್ಯವಿಲ್ಲ .

ಶ್ರೀ ಕೆ ಹೆಚ್ ರಂಗನಾಥ್ : ಸುಮ್ಮನಿರಬೇಕೆಂದು ನಾನು ಹೇಳುವುದೇ ಇಲ್ಲ। ಆ ಕೆಲಸವಾಗುತ್ತಿರತಕ್ಕದ್ದು ಸಾರ್ವಜನಿಕ ಹಿತದೃಷ್ಟಿಯಿಂದ. ಆದ್ದರಿಂದ ತಾವು ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರಲೇ ಬೇಕು. ಮತ್ತು ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. ಅದನ್ನು ನೋಡಿಕೊಂಡು ಸುಮ್ಮನಿರಬೇಕೆನ್ನತಕ್ಕ ಮಾತನ್ನು ನಾನು ಒಪ್ಪುವುದಿಲ್ಲ.

5.20 ಪಿಎಂ

ಶ್ರೀ ಜೆ.ಸಿ.ಮಾಧುಸ್ವಾಮಿ : ಭೈರೇಗೌಡರೇ, 2 ವರ್ಷಗಳಾಗಿದೆ ಮತ್ತಿಘಟ್ಟ ರೋಡ್ ಬಗ್ಗೆ ಟೆಂಡರ್ ಆಗಿ ಇವತ್ತಿನವರೆಗೂ ಒಂದು ಕೆಲಸವನ್ನು ಶುರು ಮಾಡಿಲ್ಲ. ನಾವು ಯಾರನ್ನು ಕೇಳುವ ಸ್ಥಿತಿಯಲ್ಲಿಲ್ಲ. ಇದನ್ನು ಬಾರಿ ರಿಜಿಡ್ ಆಗಿ ತೆಗೆದುಕೊಳ್ಳಬಾರದು.

ಶ್ರೀ ಸಿ .ಬೈರೇಗೌಡ : ಅದು ಏನಾಗುತ್ತದೆ ಎಂದರೆ ಇವರು ಒಂದು ಉಪಾಯ ಮಾಡಿದ್ದಾರೆ. ಇವರ ಉಪಾಯ ಎಷ್ಟು ದಿವಸ ನಡೆಯುತ್ತದೆಯೊ ಗೊತ್ತಿಲ್ಲ. ಈಗ ಏನು ಮಾಡಿದ್ದಾರೆ ಈ ವರ್ಷದಿಂದ ಮೊದಲು ಬಡ್ಜೆಟ್‌ನಲ್ಲಿ ಮೂರನೆ ಒಂದು ಪ್ರಾವಿಷನ್ ಎಂದು ಮಾಡುತ್ತಿದ್ದೀರಿ ಮೂರನೇ ಒಂದು ಭಾಗ ಬಡ್ಜೆಟ್‌ನಲ್ಲಿ ಇರುತ್ತಿತ್ತು. ಈಗ ಈ ವರ್ಷ ಏನು ಮಾಡಿದ್ದಾರೆ ಮೂರನೇ ಒಂದು ಭಾಗಕ್ಕೆ ಬದಲಾಗಿ ಐದನೇ ಒಂದು ಭಾಗವೆಂದು ಮಾಡಿದ್ದಾರೆ. ಅಂದರೆ ಒಂದು ಕೆಲಸ ಬಡ್ಜೆಟ್‌ನಲ್ಲಿ ಬಂದರೆ ಅದನ್ನು ಟೆಂಡರ್‌ನಲ್ಲಿ ಇಟ್ಟರೆ ಅದು ಈ ವರ್ಷ ಇಷ್ಟೇ ಹಣವೆಂದು ಇದು 5 ವರ್ಷಕ್ಕೂ ಹೋಗುತ್ತದೆ. ಈ ಕಾರಣದಿಂದ ಶ್ರೀ ಮಾಧುಸ್ವಾಮಿಯವರು ಹೇಳಿದ ಹಾಗೆ ನಿಧಾನವಾಗುತ್ತದೆ. ಇವತ್ತಿನ ದಿವಸ 20 ಲಕ್ಷ ರೂಪಾಯಿಗಳ ಕೆಲಸಕ್ಕೆ ನೀವು 4 ಲಕ್ಷ ರೂ.ಗಳು ಈ ವರ್ಷದ ಕೆಲಸ, ಬರುವ ವರ್ಷ 4ಲಕ್ಷ ರೂ.ಗಳು ಈ ರೀತಿಯಾಗುತ್ತದೆ. 5 ವರ್ಷಗಳ ಕಾಲ ಐದನೇ ಒಂದು ಭಾಗವೆಂದು ಇಟ್ಟಿರುತ್ತೀರಿ. ಮೊದಲು ಮೂರನೆ ಒಂದು ಭಾಗವೆಂದು ಇತ್ತು. ಆಗ ಶೀಘ್ರವಾಗಿ ಆಗುತ್ತಿತ್ತು. ಈಗ ಐದನೇ ಒಂದು ಭಾಗವೆಂದು ಮಾಡಿರುವುದರಿಂದ 20 ಲಕ್ಷ ರೂ. ಗಳ ಕೆಲಸ ಮಾಡಬೇಕಾದರೆ 5 ವರ್ಷಗಳು ಆಗುತ್ತದೆ. ಅಷ್ಟರಲ್ಲಿ ಎಷ್ಟು ಬದಲಾವಣೆಗಲು ಆಗಿರುತ್ತದೆ ಎನ್ನುವುದನ್ನು ತಾವು ಗಮನಿಸಬೇಕು. ಆದುದರಿಂದ ಇದನ್ನು ಈ ರೀತಿಯಾಗಿ ಮಾಡುವುದು ಬೇಡ. ಟೆಂಡರ್ ಇಟ್ಟ ಮೇಲೆ ಅವರಿಗೆ ಅವಧಿಯನ್ನು ಇಷ್ಟು ಎಂದು ಕೊಟ್ಟಿರುತ್ತೀರಿ, ಆ ಅವಧಿಯಲ್ಲಿ ಅವರು ಅದನ್ನು ಮುಗಿಸಬೇಕು. ಅವರು ಮುಗಿಸದೇ ಇದ್ದರೆ ಅವರಿಗೆ ಪೆನಾಲ್ಟಿ ಹಾಕುವುದಕ್ಕೆ ಪಿ ಡಬ್ಲ್ಯೂ ಕೋಡ್ ಪ್ರಕಾರ ಅವಕಾಶವಿದೆ. ಆ ಕೆಲಸನ್ನು ಅವರ ಖರ್ಚಿನಲ್ಲೇ ಇಲಾಖೆಯವರೇ ಮಾಡಿಸಬೇಕೆಂದು ಕೂಡ ನಿಮ್ಮ ಕಂಡೀಷನ್‌ನಲ್ಲಿ ಅವಕಾಶವಿದೆ. ಅದರಲ್ಲಿ ಇರತಕ್ಕದ್ದು ಏನೆಂದರೆ ನೀವು ಸರಿಯಾದಂತಹ ರೀತಿಯಲ್ಲಿ ಅದಕ್ಕೆ ಹಣವನ್ನು ಬಿಡುಗಡೆ ಮಾಡುವುದಿಲ್ಲ . ಅದುದರಿಂದ ಒಂದು ವರ್ಷಕ್ಕೆ ಆಗಬೇಕಾದಂತಹ ಕೆಲಸ 5 ವರ್ಷಕ್ಕೆ ಹೋಗುತ್ತದೆ. ಈ ಕಾರಣದಿಂದ ಸ್ವಲ್ಪ ಲೋಪಾವಾಗಿರಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ :- ಇಲಾಖೆಯಿಂದ ಕಬ್ಬಿಣ ಮತ್ತು ಸಿಮೆಂಟ್ ಕೊಡದೇ ಹೋದರೆ ಟೆಂಡರ್ ಹಾಕುವುದಕ್ಕೆ ಯಾರೂ ಬರುವುದಿಲ್ಲ. ಪ್ರತಿ ಮಾರ್ಚ ತಿಂಗಳಲ್ಲಿ ಕಬ್ಬಿಣದ ಬೆಲೆ ಹೆಚ್ಚಾಗುತ್ತದೆ. ಇದರಿಂದ ಟೆಂಡರ್ ಹಾಕುವವರು ಎಲ್ಲಿ ಹಾಕುತ್ತಾರೆ? ಇಲಾಖೆಯವರು ಮಾಡುವುದಕ್ಕೆ ಕೂಡ ಅವಕಾಶವಾಗುತ್ತದೆ ಎಂದು ಕಾಣುತ್ತದೆ.

ಶ್ರೀ ಸಿ. ಭೈರೇಗೌಡ : ಅದೇ ತರಹ ಸದಸ್ಯರಾದಂಥ ಶ್ರೀ ಮಾಧುಸ್ವಾಮಿಯವರು ಹೇಳುತ್ತಿರುವಂಥಾದ್ದು ಆಗುತ್ತಾ ಇದೆ. ಬಿಲ್ಡಿಂಗ್ ಕೆಲಸ ಮಾಡಬೇಕಾದರೆ ಅದಕ್ಕೆ ಬಹಳ ಮುಖ್ಯವಾದುದ್ದು ಸಿಮೆಂಟ್ ಮತ್ತು ಕಬ್ಬಿಣ, ಇವೆರಡೂ ಕೂಡ ಕಂಟ್ರಾಕ್ಟದಾರರು ಹಾಕಿಕೊಳ್ಳುತ್ತಿದ್ದಾರೆ. ಅವರ ಖರ್ಚಿನಲ್ಲೇ ಕೊಂಡು ತರುತ್ತಿದ್ದಾರೆ. ಆದುದರಿಂದ ಕಟ್ಟಡದ ಕೆಲಸಗಳು ಇವತ್ತಿನ ದಿವಸ ನಿಧಾನವಾಗುತ್ತಿದೆ. ಏಕೆಂದರೆ ಅವರು ಟೆಂಡರ್ ಹಾಕುವಂತಹ ಸಂದಭದಲ್ಲಿ ಸಿಮೆಂಟ್ ಮತ್ತು ಕಬ್ಬಿಣ ಒಂದು ಬೆಲೆ ಇರುತ್ತದೆ. ಪ್ರತಿ ತಿಂಗಳು ಸಿಮೆಂಟ್ 5ರೂ. 10 ರೂ. ಗಳು ಮೂಟೆಗೆ

ಜಾಸ್ತಿಯಾಗುತ್ತಿದೆ. ನನಗೆ ಗೊತ್ತಿರುವ ಹಾಗೆ 15-20 ದಿವಸಗಳ ಹಿಂದೆ ಮೂಟೆಗೆ ಇಷ್ಟು ಎಂದು ಬೆಲೆ ನಿಗದಿ ಮಾಡಿದ್ದಾರೆ . ಮಾರ್ಚ-ಏಪ್ರಿಲ್ ನಿಂದ ಸುಮಾರು 4-5 ತಿಂಗಳಿನವರೆಗೂ ಯಾರು ಸಿಮೆಂಟ್ ಕೊಂಡುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಅವರು ಕೊಂಡು ಕೊಂಡಿಲ್ಲ ಮತ್ತು ಕೆಲಸ ಕೂಡ ಆಗಿಲ್ಲ. ಅದೇ ರೀತಿ ಕಬ್ಬಿಣವನ್ನು ಕೊಂಡುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಆ ಕೆಲಸವೂ ಆಗಿಲ್ಲ. ಕೆಲಸ ನಿಧಾನವಾಗುವುದಕ್ಕೆ ಮುಖ್ಯ ಕಾರಣ. ಈಗ ಹಳೆಯ ಪದ್ಧತಿಯನ್ನೇ ಅನುಸರಿಸುತ್ತಾರೆಂಬ ವಿಷಯವನ್ನು ಕೇಳ್ಪಟ್ಟೆ. ಅಂದರೆ ಇಲಾಖೆಯಿಂದ ಸಿಮೆಂಟ್, ಕಬ್ಬಿಣ. ಕೊಡುವಂತಹ ವ್ಯವಸ್ಥೆ ಮಾಡುತ್ತಾ ಇದ್ದಾರೆ ಎಂಬ ಮಾತನ್ನು ಕೇಳ್ಪಟ್ಟೆ. ಅದು ನಿಜವಾದರೆ ಒಳ್ಳೆಯ ಕ್ರಮವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅದೇ ರೀತಿ ರಸ್ತೆಗಳ ಬಗ್ಗೆ ಹೇಳಬೇಕಾದರೆ ಅದಕ್ಕೆ ಉಪಯೋಗಿಸುವಂತಹ ಟಾರ್ ಏನಿದೆ ಅದು ಒಂದು ಬ್ಯಾರಲ್‌ಗೆ 1,200 ರೂ.ಗಳಿಂದ 1,300 ರೂ.ಗಳವರೆಗೂ ಆಗುತ್ತದೆ. ದಯಮಾಡಿ ಕ್ಷಮಿಸಬೇಕು. ಅದು ಏಕೆ ಕಳಪೆ ಕೆಲಸ ಆಗುತ್ತಿದೆ ಎಂದರೆ ಚದರ ಆಗಿ ಮೇಲೆ ಅಥವಾ ಚದರ ಮೀಟರ್ ಮೇಲೆ ಲೆಕ್ಕ ಹಾಕುತ್ತಾರೆ. ಅದನ್ನು ಬಿಟ್ಟು ಒಂದು ಬ್ಯಾರಲ್ ಟಾರ್ ಉಳಿಯಿತು ಎಂದರೆ 1,200 ರೂಪಾಯಿಗಳು ಆಗುತ್ತದೆ. ನನ್ನ ಕ್ಷೇತ್ರದಲ್ಲಿ ಒಂದು ಕಡೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟದ್ದಲ್ಲ, ಜಿಲ್ಲಾ ಪರಿಷತ್ತಿಗೆ ಸಂಬಂಧಪಟ್ಟಂತಹ ಕೆಲಸ 1 08 ಬ್ಯಾರಲ್ ಟಾರ್ ಇರಬೇಕಾಗಿತ್ತು. 108 ಬ್ಯಾರಲ್ ಉಪಯೋಗಿಸುವ ಬದಲಾಗಿ 52 ಬ್ಯಾರಲ್ ಟಾರ್ ಉಪಯೋಗಿಸಿದ್ದಾರೆ. ಅದು ಹಳ್ಳಿಯವರಿಂದ ನಮಗೆ ಲೆಕ್ಕ ಸಿಕ್ಕಿತ್ತು. ಹಳ್ಳಿಯವರು ಬಹಳ ಎಚ್ಚರಿಕೆ ವಹಿಸಿದ್ದಾರೆ. ಪ್ರತಿದಿನ ಎಷ್ಟೆಷ್ಟು ಬ್ಯಾರಲ್ ಟಾರ್ ಉಪಯೋಗಿಸಿದ್ದಾರೆ ಎಂಬುದನ್ನು ತೋರಿಸಿದ್ದಾರೆ. ನಾನು ಎಕ್ಸಿಕ್ಯೂಟಿವ್ ಇಂಜಿನಿಯರ್‌ಅನ್ನು ಕರೆದುಕೊಂಡು ಸ್ಥಳಕ್ಕೆ ಹೋದೆ. 4-5 ಕಡೆ ಎಷ್ಟು ಮಂದವಾಗಿ ಟಾರ್ ಹಾಕಿದ್ದಾರೆ ಎಂಬುದನ್ನು ಅಳತೆ ಮಾಡಿ ನೋಡಿದಾಗ ಮುಕ್ಕಾಲು ಅಂಗುಲ ಇರಬೇಕಾದ ಕಡೆ ಕಾಲು ಅಂಗುಲ ದಪ್ಪ ಟಾರ್ ಇದೆ. ಕೆಲವು ಕಡೆ ಇನ್ನೂ ಕಡಿಮೆ ಇದೆ ಮುಕ್ಕಾಲು ಅಂಗುಲ ಇರತಕ್ಕಂಥಾದ್ದು ಕೆಲವು ಕಡೆ ಕಾಲು ಅಂಗುಲ ಕೂಡ ಇಲ್ಲ. ಆದುದರಿಂದ ನನ್ನ ಸಲಹೆ ಏನೆಂದರೆ ನೀವು ನಿಮ್ಮ ಇಲಾಖೆಗೆ ಕಟ್ಟುನಿಟ್ಟಾದಂತಹ ಸೂಚನೆಗಳನ್ನು ಕೊಡಬೇಕು. ಈ ಜೆಲ್ಲಿಯಾಗಲಿ ಅಥವಾ ಬೇರೆ ಯಾವುದೇ ಬೇಕಾಗಿರತಕ್ಕಂಥಾದ್ದು ಆಗಲಿ ಮೊದಲು ರಸ್ತೆ ಮೇಲೆ ಅದನ್ನು ಶೇಖರಿಸಬೇಕಾಗಿತ್ತು . ಶೇಖರಿಸಿದ ಮೇಲೆ ಎಷ್ಟು ಜೆಲ್ಲಿ ಶೇಖರಣೆಯಾಗಿದೆ ಎಂದು ಪ್ರೀ ಮೆಷರ್‌ಮೆಂಟ್ ತೆಗೆದುಕೊಳ್ಳುತ್ತಾರೆ. ಆ ರೀತಿ ಇಲ್ಲ ಈಗ. ಈಗ ಏನು ಮಾಡುತ್ತಾರೆಂದರೆ ಒಂದು ಕಡೆ ಲಾರಿಯಲ್ಲಿ ಜೆಲ್ಲಿ ಬರುತ್ತದೆ ಇನ್ನೊಂದು ಲಾರಿಯಲ್ಲಿ ಟಾರ್ ಬರುತ್ತದೆ, ಮಿಕ್ಸರ್ ಅಲ್ಲೇ ಇರುತ್ತದೆ ಅದು ಎಷ್ಟು ಟಾರ್ ಉಪಯೋಗಿಸುತ್ತಾರೋ, ಎಷ್ಟು ಜೆಲ್ಲಿ ಉಪಯೋಗಿಸುತ್ತಾರೋ ಬ್ರಹ್ಮನಿಗೂ ಕೂಡ ಗೊತ್ತಾಗುವುದಿಲ್ಲ. ಅಂತಹ ಒಂದು ವ್ಯವಸ್ಥೆ ನಿಮ್ಮ ಇಲಾಖೆಯಲ್ಲಿ ನಡೆಯುತ್ತಿದೆ. ಆದುದರಿಂದ ನೀವು ನಿಮ್ಮ ಇಲಾಖೆಯವರಿಗೆ , ಇಷ್ಟು ಜೆಲ್ಲಿ ಆ ಸ್ಥಳದಲ್ಲಿ ಶೇಖರಣೆ ಆಗಲೇಬೇಕು , ಅದಕ್ಕೆ ಚೆಕ್ ಮೆಷರ್‌ಮೆಂಟ್ ಆಗಬೇಕು ನಂತರ ಆ ಜೆಲ್ಲಿಯನ್ನು ಉಪಯೋಗಿಸತಕ್ಕಂತಹ ವ್ಯವಸ್ಥೆ ಮಾಡಿದರೆ ಆಗ ಅಲ್ಲಿ ಕನಿಷ್ಟ ಪಕ್ಷ ಕಳ್ಳತನ ಮಾಡುವಂತಾದ್ದನ್ನು ಕೂಡ ಕಡಿಮೆ ಮಾಡುವುದಕ್ಕೆ ಸಾಧ್ಯವಿದೇ . ಇದರಿಂದ ಪೂರ್ತಿ ಸರಿಹೋಗುತ್ತದೆ. ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಟಾರ್ ಸಹ ಸ್ಥಳಕ್ಕೆ ಬರಬೇಕು. ಒಂದು ಲಾರಿಯಲ್ಲಿ ಬೆಳ್ಳಿಗ್ಗೆ ಎದ್ದರೆ ಟಾರ್ ಬರುತ್ತದೆ, ಮತ್ತೊಂದು ಲಾರಿಯಲ್ಲಿ ಜೆಲ್ಲಿ ಬರುತ್ತದೆ. ರಾತ್ರೋ ರಾತ್ರಿ ಅದನ್ನು ಮಾಯಾಬಜಾರ್ ಮಾಡತಕ್ಕಂತಹ ವ್ಯವಸ್ಥೆ ಜಾರಿಯಾಗುವುದು ಬೇಡ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಲ್. ಜಿ. ನಾಯಕ್ : ಮಾನ್ಯ ಉಪಾಧ್ಯಕ್ಷರೇ ಜೆಲ್ಲಿ ಏನು ಅಳತೆ ಮಾಡದೆ ನೋಡುವುದಿಲ್ಲ.ಅದನ್ನು ಅಳತೆ ಮಾಡಿಯೇ ಕೊಡುವುದು. ನೀವು ಬರೀ ಕ್ರಿಟಿಸೈಸ್ ಮಾಡುತ್ತಿದ್ದೀರಿ: ಇದೆಲ್ಲಾ ರಾಂಗ್ ಎಂದು ಹೇಳುತ್ತಿದ್ದೇನೆ. ಎಲ್ಲಾ ರಸ್ತೆಗಳನ್ನು ನೀವು ನೋಡಿದ್ದೀರಾ? ಯಾವ ರಸ್ತೆಗಳು ಚೆನ್ನಾಗಿ ಇಲ್ಲ ಎಂದು ಹೇಳುತ್ತಾರೆ . ಕೆಲವು ಕಡೆ ರಸ್ತೆ ನೋಡಿ ನಾಯಕನದಟ್ಟಿ ಮೇಲೆ ಹೋಗುವ ರಸ್ತೆ ನೋಡಿ ಹೇಗೆ ಇದೆ. ಅದನ್ನು 7 ವರ್ಷದ ಕೆಳಗೆ ಮಾಡಿದ್ದಾರೆ. ನಿಮಗೆ ಸುಮ್ಮನೆ ಕ್ರಿಟಿಸೈಸ್ ಮಾಡೋದು ಒಂದೇ ಇರುವುದು.

ಸ್ರೀ ಸಿ. ಭೈರೇಗೌಡ :- ಇವತ್ತು ತಾವು ಸಬೆಯಲ್ಲಿ ಹಾಜರಿದ್ದೀರಿ, ಬಹಳ ಸಂತೋಷ. ನೀವು ಬಂದಿರುವುದು ಎಲ್ಲರಿಗೂ ಗೊತ್ತಾಗಿದೆ. ನಿಮ್ಮ ಹೆಸರು ನಾಯಕ್ ಎಂದು. ನೀವು ಹೇಳಿದ ಮೇಲೆ ಒಪ್ಪಲೇಬೇಕು ಬಿಡಿ.

ಶ್ರೀ ಎನ್.ಜಿ. ನಾಯಕ್ :- ನಿಮ್ಮ ಕ್ಷೇತ್ರದಲ್ಲಿ ಎಲ್ಲಿ ರಸ್ತೆಗಳು ಚೆನ್ನಾಗಿ ಇಲ್ಲವೆಂದು ಹೇಳಿ.

ಸ್ರೀ ಸಿ. ಭೈರೇಗೌಡ :- ಮಾನ್ಯ ಉಫಾಧ್ಯಕ್ಷರೆ, ಒಂದು ಕಿ.ಮಿ, ಇಷ್ಟು ಎಂದು ಮೈಂಟೇನ್ಸ್‌ಗೆ ಏನು ಹಣ ಕೊಡುತ್ತಾರೆ, ಆ ಹಣ ನಶ್ಯಕ್ಕೆ ಕೂಡ ಸಾಕಾಗುವುದಿಲ್ಲ. ನೀವು ಕೊಡುತ್ತಿರುವ ಅಂದಾಜು ಯಾವುದೋ ಕಾಲದಲ್ಲಿ ಇಡುವಂತಾದ್ದನ್ನು ಮಾಡಿದ್ದೀರಿ. ಅದರಿಂದ ಏನೂ ಕೂಡ ಪ್ರಯೋಜನವಾಗುವುದಿಲ್ಲ. ಏಕೆಂದರೆ ನೀವು ನಿಮ್ಮ ಗ್ಯಾಂಗ್ ಎಲ್ಲಾ ಮೈಂಟೇನ್ ಮಾಡುತ್ತಿದ್ದೀರಿ. ಅವರಿಗೆ ದಿನಗೂಲಿ ಅಥವಾ ನಿಗದಿಯಾದಂತಹ ಸಂಬಳನ್ನು ಕೊಡುತ್ತಿದ್ದೀರಿ. ಅವರು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾರೋ ಬಿಡುತ್ತಾರೋ ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದರ ವಿಚಾರ ಹೆಚ್ಚಾಗಿ ಮಾತನಾಡುವುದಕ್ಕಿಂತ ಕಡಿಮೆ ಮಾತನಾಡುವುದೆ ಒಳ್ಳೆಯದು. ಆದರೆ ಅಲ್ಲಿ ಬರತಕ್ಕಂತಹ ಹಣ ಎಲ್ಲಾ ಅವರ ಸಂಬಳಕ್ಕೆ ಹೋಗುತ್ತದೆ, ರಸ್ತೆಯಲ್ಲಿ ಕೆಲಸ ಆಗುತ್ತಾ ಇಲ್ಲ. ಅದನ್ನು ದಯವಿಟ್ಟು ಈ ವಾರ್ಷಿಕ ಮೈಂಟೇನ್ ಎಂದು ಏನು ಕೊಡುತ್ತಿದ್ದಾರೆ....

ಶ್ರೀ ಕೆ.ಎಚ್. ರಂಗನಾಥ್ :- ಅವರ ಸಂಬಳವನ್ನು ಪ್ರತ್ಯೇಕವಾಗಿ ಕೊಡುತ್ತಾರೆ. ಇದು ಮೈಂಟೇನ್ಸ್‌ನಲ್ಲಿ ಹೋಗುವುದಿಲ್ಲ .

ಶ್ರೀ ಸಿ. ಭೈರೇಗೌಡ :- ಮೈಂಟೆನೆನ್ಸ್ ಗ್ರಾಂಟ್‌ನ್ನು ಇವತ್ತು ಕನಿಷ್ಟ ಪಕ್ಷ ಎರಡರಷ್ಟು ಕೊಡುವುದಕ್ಕೆ ಮನಸ್ಸು ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆಯೆಂದರೆ

ರಸ್ತೆ ಪಕ್ಕದಲ್ಲಿ ಒಂದು ಸಣ್ಣ ಗುಂಡಿ ಬೀಳುತ್ತದೆ. ಸ್ವಾಭಾವಿಕವಾಗಿ ಮಳೆಗಾಲದಲ್ಲಿ ಸಣ್ಣ ಗುಂಡಿ ಬೀಳುವುದು ಸಹಜ. ಬಿದ್ದಂತಹ ಮಳೆಗೆ ನಮ್ಮ ರಸ್ತೆಗಳು ಹೇಗೆ ಇವೆ ಎಂದರೆ ರಸ್ತೆ ಎಲ್ಲಾ ಕಿತ್ತುಹೋಗಿವೆ. ಆದ್ದರಿಂದ ರಸ್ತೆಯಲೆಲ್ಲಾ ಸಣ್ಣಸಣ್ಣ ಗುಂಡಿಗಳು ಬೀಳುತ್ತವೆ. ಅದಕ್ಕೆ ನಾಲ್ಕು ಬಾಂಡ್ಲಿ ಮಣ್ಣು ಹಾಕಿ ಅದನ್ನು ಸರಿಪಡಿಸಿದರೆ ಅದು ಹಾಳುಗುವುದಿಲ್ಲ. ಇಲ್ಲದಿದ್ದರೆ ಈ ಗುಂಡಿ ದೊಡ್ಡದಾಗಿ ಅರ್ಧ ರಸ್ತೆಯುವರೆಗೂ ಕೊರೆದುಕೊಂಡು ಬರುತ್ತದೆ. ಇಂತಹ ಪರಿಸ್ಥಿತಿ ಉಂಟಾಗುತ್ತದೆ. ಇದನ್ನು ತಪ್ಪಿಸುವುದಕ್ಕೋಸ್ಕರ ಮೈಂಟೆನೆನ್ಸ್ ಗ್ರಾಂಟ್‌ನ್ನು ಈಗ ನೀವು ಏನು ಕೊಡುತ್ತಿದ್ದಿರೋ ಅದರ ಎರಡು ಪಟ್ಟು ಕೊಡಬೇಕು ಎಂದು ಲೋಕೋಪಯೋಗಿ ಮಂತ್ರಿಗಳನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇದಲ್ಲದೆ ಇವತ್ತಿನ ದಿವಸ ಸರ್ಕಾರದ ಇಲಾಖೆಯಲ್ಲಿ ಕಟ್ಟತಕ್ಕಂತಹ ಅನೇಕ ಕಟ್ಟಡಗಳಲ್ಲಿ ಮರವನ್ನು ಉಪಯೋಗಿಸಕೂಡದು ಎನ್ನುವ ನಿಭಂದನೆಯನ್ನು ಬಹಳ ಕಟ್ಟುನಿಟ್ಟಾಗಿ ಹೇರಿದ್ದೀರಿ ಎಂದು ತಿಳಿದುಬಂದಿತು. ನಮ್ಮ ಕಾಡುಗಳೆಲ್ಲಾ ಕೂಡ ಹಾಳಾಗಿ ಹೋಗುತ್ತದೆ. ಇದನ್ನು ಉಪಯೋಗಿಸಿದರೆ ನಮ್ಮ ಕಾಡಾದರೂ ಕೂಡ ಉಳಿಯುತ್ತದೆ, ಇದನ್ನು ಕಟ್ಟುನಿಟ್ಟಾಗಿ ತಾವು ಜಾರಿಗೆ ತರಬೇಕಾದಂಥ ಅವಶ್ಯಕತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ತಾವು ಬಂದಮೇಲೆ ಎಷ್ಟು ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಿದ್ದೀರಿ? ಇದು ಈ ಸರ್ಕಾರದ ವೈಫಲ್ಯತೆಯನ್ನು ತೋರಿಸುತ್ತದೆ. ಬೇರೆ ರಾಜ್ಯಗಳಿಗೆ ಸರಾಸರಿ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಎಷ್ಟಿದ್ದಾವೆ ಎಂಬ ಹೋಲಿಕೆಯನ್ನು ದಯವಿಟ್ಟು ತಾವು ಕೊಡಬೇಕಾಗುತ್ತದೆ ಈಗ ತಮಗೆ ಗೊತ್ತಿದೆ ನಾವೇ ಎಷ್ಟೋ ಸಾರಿ ಬಂದು ತಮ್ಮ ಹತ್ತಿರ ಈ ರಸ್ತೆ ಹಾಗೆ ಮಾಡಿ ಹೀಗೆ ಮಾಡಿ ಎಂದು ಕೇಳುತ್ತೇವೆ. ಏನೊ ಬೈರೇಗೌಡರು ಹೇಳಿದರು ಆಯಿತು ಮಾಡಿಸೋಣ ಎಂದು ಅನೇಕ ಸಂದರ್ಭಗಳಲ್ಲಿ ಒಂದು ಮುಲಾಜಿಗಾದರೂನೂ ತಾವು ಒಪ್ಪುತ್ತೀರಿ, ಅದಿಲ್ಲ ಎಂದು ನಾನು ಹೇಳುವುದಿಲ್ಲ. ಅದು ಆ ವರ್ಚಸ್ಸಿನ ಮೇಲೆ ಅವಲಂಬಿಸಿರುತ್ತದೆ. ಇವತ್ತು ಈ ಸರ್ಕಾರಕ್ಕೆ ಕೇಂದ್ರ ಸರ್ಕಾರದಲ್ಲಿ ಆ ವರ್ಚಸಿಲ್ಲ. ಆ ವರ್ಚಸ್ಸು ಇಲ್ಲದೇ ಇರುವ ಕಾರಣಾಂತರದಿಂದ ಇವತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತ್ಯಂತ ಹಿಂದುಳಿದ ರಾಜ್ಯ ಆಗಿದೆ ಈ ನಮ್ಮ ರಾಜ್ಯ. ತಾವು ಎಲ್ಲಿಯವರೆಗೆ ಈ ಅಧಿಕಾರದಲ್ಲಿರುತ್ತಿರೋ ಅಲ್ಲಿಯವರೆಗೆ ಒಂದು ತೀವ್ರವಾದಂಥ ಪ್ರಯತ್ನವನ್ನು ಪಟ್ಟು ಈ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾರ್ಪಡಿಸುವುದಕ್ಕೆ ತೀವ್ರವಾದಂಥ ಪ್ರಯತ್ನವನ್ನು ತಾವು ನಡೆಸಲೇಬೇಕೆಂದು ನಾನು ರಾಜ್ಯದ ಹಿತದೃಷ್ಟಿಯಿಂದ ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಬಹಳ ವಿಚಾರಗಳನ್ನು ಈ ಲೋಕೋಪಯೋಗಿ ಇಲಾಖೆ ಬಗ್ಗೆ ಮಾಡಬೇಕಾಗಿದೆ. ಈ ಹೊರೆ ಇರುವುದರಿಂದ ಯಾವುದರ ಮೇಲೆ ಮಾತಾನಾಡಬೇಕು ಅಂತ ನನಗೆ ಒಂದು ಜಿಜ್ಞಾಸೆ ಉಂಟಾಗಿದೆ ಆದುದರಿಂದ ಇದನ್ನು ಇಲ್ಲಿಗೆ ನಿಲ್ಲಿಸಿ ತಾವು ಇಷ್ಟು ಮಾತನಾಡಲಿಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ :- (ಕನಕಪುರ) ಸನ್ಮಾನ್ಯ ಉಪಸಭಾಧ್ಯಕ್ಷರೇ ಇವತ್ತು ಮಂಡಿಸಿರತಕ್ಕಂಥ ಬೇಡಿಕೆಗಳ ಎಲ್ಲದರ ವಿಚಾರದಲ್ಲೂ ಸಹಿತ ಮಾತನಾಡಬೇಕು ಎನ್ನತಕ್ಕಂಥ ಆಸೆ ನನಗಿದ್ದರೂ ಸಹಿತ ಒಂದೆರೆಡು ಇಲಾಖೆಗಳ ಬಗ್ಗೆ ನನ್ನ

ಅಭಿಪ್ರಾಯವನ್ನು ತಿಳಿಯಬಯಸುತ್ತೇನೆ. ಮುಖ್ಯವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ಬಗ್ಗೆ ಒಂದೆರಡು ಅಭಿಪ್ರಾಯಗಳನ್ನು ಈ ಸಂಧರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ನಮ್ಮ ಯಾಹ್ಯಾರವರಿಗೆ ನೇರವಾಗಿ ಸಂಬಂಧವಿಲ್ಲದಿದ್ದರೂ ಅವರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ ಇದು ಶ್ರೀ ಶಿವಣ್ಣನವರೂ ಸಹ ಇಲ್ಲ . ಈ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಮಾನ್ಯ ದೇವರಾಜು ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹೃದಯ ರೋಗಕ್ಕೆ ಸಂಬಂಧಪಟ್ಟ ಹಾಗೆ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಎಂದು ನಾವು ಕೆಲವು ಡೋಲರ್ಸ್‌ಗಳನ್ನೆಲ್ಲಾ ಪತ್ತೆ ಮಾಡಿ ಅದನ್ನು ಒಂದು ಅಟಾನಮಸ್ ಇನ್‌ಸ್ಟಿಟ್ಯೂಟ್ ಮಾಡಬೇಕು, ಒಂದು ಸಾಂಸ್ಥಿಕ ಸಂಸ್ಥೆಯನ್ನಾಗಿ ಮಾಡಬೇಕೆನ್ನುವ ಉದ್ದೇಶದಿಂದ ಅದನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಬೇರ್ಪಡಿಸಿರುವುದು ತಮಗೆಲ್ಲಾ ಗೊತ್ತಿರತಕ್ಕ ವಿಚಾರ. ಅದಾದಮೇಲೆ 83ನೇ ಇಸವಿಯಲ್ಲಿ ಮಾನ್ಯ ರಾಷ್ಟ್ರಾಧ್ಯಕ್ಷರು ಬಂದು ಅದನ್ನು ಉದ್ಘಾಟನೆ ಮಾಡಿದರು. ಅನಂತರ ಅದು ಒಂದು ಸ್ವಾಯತ್ತ ಸಂಸ್ಥೆಯಾಗಿ ಬೆಳೆದುಕೊಂಡು ಬರುತ್ತಿದೆ. ಅದಕ್ಕೆ ನಾವು ಈಗ ಮಾಡಬೇಕಾಗಿರತಕ್ಕದ್ದು ಎಂದರೆ ಸುಮಾರು 10 ಎಕರೆ ಜಮೀನನ್ನು ಬನ್ನೇರುಘಟ್ಟದ ಪಕ್ಕದಲ್ಲಿ ಕೊಟ್ಟು ಅಲ್ಲಿ ಸುಮಾರು 500 ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕು. ಅದಕ್ಕೆ ವಿದೇಶದಿಂದ ಹಣದ ಸಹಾಯ ಏನಾದರೂ ಬರುವುದಾದರೆ ಅದನ್ನೂ ತೆಗೆದುಕೊಳ್ಳಬೇಕು, ನಮ್ಮಲ್ಲೂ ಕೂಡ ಯಾರಾದರೂ ವಂತಿಗೆಯನ್ನು ಕೊಡುವವರಿದ್ದರೆ ಅವರನ್ನುಪತ್ತೆಮಾಡಿ ಸಹಾಯ ಪಡೆದು ಅದನ್ನು ಒಂದು ಸೂಪರ್ ಸ್ಪೆಷಲೈಸೇಷನ್ ಆಸ್ಪತ್ರೆ ಆಗಿ ಮಾಡಬೇಕೆಂಬ ಉದ್ದೇಶದಿಂದ ನಾವು ಹೊರಟಿದ್ದಿದ್ದು. ಆದರೆ ಏನಾಗಿದೆ ಎಂದರೆ, ಈ ಕಟ್ಟಡಕ್ಕೆ 3 ಜನ ಮುಖ್ಯ ಮಂತ್ರಿಗಳೂ ಇದಕ್ಕೆ ಗುದ್ದಲಿ ಪೂಜೆಯನ್ನು ಮಾಡಿದ್ದಾರೆ. ಏತಕ್ಕೆ ಇವರು ಹೀಗೆ ಮಾಡುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ತಾವು ಕೂಡ ಬಹುಶಃ ಆ ಸಂಸ್ಥೆಯ ಬೋರ್ಡ್ ಆಫ್ ಡೈರೆಕ್ಟರ್ ಆಗಿ ಕೆಲಸಮಾಡಿದ್ದೀರಿ. ತಾವು ವೈಸ್ ಛೇರ್ಮನ್ ಆಗಿದ್ದುದರಿಂದ ಅದು ತಮಗೆ ಚೆನ್ನಾಗಿ ಗೊತ್ತಿದೆ. ಮೊದಲು ಮಾನ್ಯ ವೀರೇಂದ್ರಪಾಟೀಲರು ಈ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದರು, ಅದನ್ನು ತೆಗೆದು ಮಾನ್ಯ ಬಂಗಾರಪ್ಪನವರು ಅಡಿಗಲ್ಲು ಇಟ್ಟರು, ನಂತರ ಇದನ್ನೂ ಕೂಡ ಮಾನ್ಯ ವೀರಪ್ಪಮೊಯ್ಲಿಯವರು ತೆಗೆದು ಹಾಕಿ ತಾವೂ ಇತ್ತೀಚೆಗೆ ಅಡಿಗಲ್ಲು ಹಾಕಿ ಬಂದಿದ್ದಾರೆ. ಇದನ್ನು ಏತಕ್ಕೆ ಮಾಡಿದರೆಂದು ನನಗೆ ಅರ್ಥವಾಗುತ್ತಿಲ್ಲ. ಒಂದೇ ಕಟ್ಟಡಕ್ಕೆ 3 ಜನ ಮುಖ್ಯಮಂತ್ರಿಗಳೂ ಕೂಡ 3 ಸಾರಿ ಅಡಿಗಲ್ಲು ಹಾಕಿ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಅದು ಮೂಲೆ ಕಲ್ಲುಗಳೆಂದು ಪೂಜೆ ಮಾಡುವಾಗ ಒಂದೊಂದು ಮೂಲೆಗೆ ಒಂದೊಂದು ಕಲ್ಲುಗಳನ್ನು ಹಾಕುತ್ತಾರೆ, ಈಗ ಇನ್ನೊಂದು ಕಲ್ಲನ್ನು ಹಾಕಿದರೆ 4 ಜನ ಮುಖ್ಯ ಮಂತ್ರಿಗಳು ಹಾಕಿದಂತಾಗುತ್ತದೆ. ಮುಂದಿನಸಾರಿ ಬರುವವರು ಆ ಕಲ್ಲನ್ನು ಹಾಕುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಏನು ಹೇಳಿದ್ದಾರೆಂದರೆ, ಈ ಜಯದೇವ ಆಸ್ಪತ್ರೆಗೆ ನಾವು ಎಸ್.ಡಿ.ಎಸ್ ಸ್ಯಾನಿಟೋರಿಯಂನ್ನು ಸೇರಿಸಿ ಒಂದು ಆಸ್ಪತ್ರೆಯನ್ನಾಗಿ ಮಾಡುತ್ತೇವೆಂದು

ಹೇಳಿದ್ದಾರೆ. ತಮಗೆ ಗೊತ್ತಿರುವಂತೆ ಟಿ.ಬಿ. ಬೇರೆ ಖಾಯಿಲೆ ಹೃದಯ ಮತ್ತು ಶ್ವಾಸಕೋಶಗಳಿಗೆ ಸಂಬಂಧಪಟ್ಟದ್ದು ಬೇರೆ ಖಾಯಿಲೆ. ಈ ಕಾರಣದಿಂದಲೇ ಸುಮಾರು 24 ವರ್ಷಗಳ ಹಿಂದೆಯೇ ಮಾನ್ಯ ದೇವರಾಜು ಅರಸ್‌ರವರೂ ಮತ್ತು ನಾವೂಸೇರಿ ಇದನ್ನು ಸೂಪರ್ ಸ್ಪೆಷಲೈಸೇಷನ್ ಆಸ್ಪತ್ರೆ ಎಂದು ಮಾಡಬೇಕೆಂದು ನಿರ್ಧರಿಸಿದ್ದೆವು. ಆದರೆ ಮತ್ತೆ ಇದನ್ನು ಮರ್ಜ್ ಮಾಡುವುದರಲ್ಲಿ ಏನು ಅರ್ಥ ಇದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಯಾರನ್ನು ತೃಪ್ತಿ ಮಾಡುವುದಕ್ಕೆ., ಯಾವ ಉದ್ದೇಶಕ್ಕೆ ಮಾಡುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅವತ್ತಿನ ಕಾರ್ಯಕ್ರಮಕ್ಕೆ ನನ್ನನ್ನೂ ಕೂಡ ಕರೆದಿದ್ದರು ಆದರೆ ನಾನು ಅವತ್ತು ಹೋಗಲಿಲ್ಲ. ಏಕೆಂದರೆ , ಮೊದಲನೇ ಸಾರಿ ಮಾನ್ಯ ವೀರೇಂದ್ರಪಾಟೀಲರು ಅಡಿಗಲ್ಲು ಹಾಕಿದ ಸಮಾರಂಭಕ್ಕೆ ನಾನೂ ಹೋಗಿದ್ದೆ. ಮತ್ತೆ ಎರಡನೇ ಸಾರಿ, ಮೂರನೇ ಸಾರಿ ಅದೇ ಕಾರ್ಯಕ್ರಮಕ್ಕೆ ಹೋಗಿ ಭಾಗವಹಿಸಲು ನನಗೇ ನಾಚಿಕೆಯಾಗುತ್ತದೆ. ಬಹುಶಃ ಇದನ್ನು ಅವರ ಪ್ರಚಾರಕ್ಕಾಗಿ ಎಂದು ಮಾಡಿಕೊಂಡಿರಬಹುದು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಟಿ.ಬಿ. ಆಸ್ಪತ್ರೆಯನ್ನು ಇದರಲ್ಲಿ ಮರ್ಜ್ ಮಾಡುವುದು ಅಷ್ಟು ಸಾಧುವಾದ ಕ್ರಮವಲ್ಲ. ನಾನು ಸರ್ಕಾರದಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಇವತ್ತು ಇಂತಹ ಸಂಸ್ಥೆಗಳನ್ನು ಬೆಳೆಸುವುದು ಬಹಳ ಕಷ್ಟವೆಂಬುದು ತಮಗೂ ಗೊತ್ತಿದೆ. ಈ ಜಯದೇವ ಆಸ್ಪತ್ರೆ ಎಂದರೆ, ಇಡೀ ರಾಜ್ಯದಲ್ಲಿ ಯಾರು ಬಡವರಿದ್ದಾರೆ, ಯಾರಿಗೆ ಹೃದಯರೋಗ ಬರುತ್ತದೆ ಅಂಥ ಜನರಿಗೆ ಒಳ್ಳೆಯ ವ್ಯವಸ್ಥೆಯನ್ನು ಮಾಡಿರುವಂಥ ಒಂದು ಒಳ್ಳೆಯ ಸುಸಜ್ಜಿತ ಆಸ್ಪತ್ರೆ. ಇದರಲ್ಲಿ ಸ್ವಲ್ಪಮಟ್ಟಿಗೆ ಲೋಪದೋಷಗಳಿರಬಹುದು.ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ. ಈ ಆಸ್ಪತ್ರೆಗೆ ಟಿ.ಬಿ. ಆಸ್ಪತ್ರೆಯನ್ನೂ ಸೇರಿಸುತ್ತೇವೆಂದರೆ ನಾವು ಮೊದಲು ಯಾವ ಉದ್ದೇಶವನ್ನಿಟ್ಟುಕೊಂಡು ಪ್ರಾರಂಭ ಮಾಡಿದ್ದೆವು ಅದಕ್ಕೆ ಇದು ವಿರೋಧವಾಗುತ್ತದೆ. ಹಿಂದೆ ಮಾನ್ಯ ಚನ್ನಬಸಪ್ಪ ಎನ್ನುವವರು ಇದ್ದರು. ಮಾನ್ಯ ದೇವರಾಜ ಅರಸರವರು ಬದುಕಿದ್ದಾಗ ಅವರು ಹಣವನ್ನು ಕೊಟ್ಟಿದ್ದರು. ಇವತ್ತು ಜಯದೇವ ಆಸ್ಪತ್ರೆ ಎಂದು ಹೆಸರು ಬರುವುದಕ್ಕೆ ಅವರೇ ಕಾರಣ. ಇದನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಬೇರ್ಪಡಿಸುವ ಅಗತ್ಯವಾದರೂ ಏನಿತ್ತು ? ಇದನ್ನು ಅಲ್ಲಿರಿದ ಪ್ರತ್ಯೇಕ ಮಾಡಿ, ಇದಕ್ಕಾಗಿಯೇ ಪ್ರತ್ಯೇಕವಾದ ಸ್ಟಾಫ್, ನರ್ಸಿಂಗ್ ಸ್ಟಾಫ್, ಡೈರೇಕ್ಟರ್‌ನ್ನು, ಡಾಕ್ಟರಗಳನ್ನು ನೇಮಕ ಮಾಡಿ ಬೇರೆ ಬೇರೆ ದೇಶ ವಿದೇಶಗಳ ತಜ್ಞರನ್ನು ಕರೆಯಿಸಿಕೊಂಡು ಇಷ್ಟೆಲ್ಲಾ ಮಾಡಿ ಈಗ ಮತ್ತೆ ಇದಕ್ಕೆ ಟಿ.ಬಿ. ಆಸ್ಪತ್ರೆಯನ್ನು ಸೇರಿಸುತ್ತೇವೆಂದರೆ ಮತ್ತೆ ನಾವು 25 ವರ್ಷಗಳಷ್ಟು ಹಿಂದಕ್ಕೆ ಹೋದಂತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದು ಪೂರ್ವಾಲೋಚನೆ ಇಲ್ಲದೆ ಹೇಳಿರತಕ್ಕ ಹೇಳಿಕೆಯೆಂದು ನಾನು ತಿಳಿದುಕೊಂಡಿದ್ದೇನೆ, ಅದನ್ನು ಮಾನ್ಯ ಮುಖ್ಯಮಂತ್ರಿಗಳು ಪುನರ್ ಪರಿಶೀಲನೆ ಮಾಡಬೇಕೆಂಬಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಇನ್ನು ಎರಡನೆಯದಾಗಿ ಸಂಜಯ್‌ಗಾಂಧಿ ಆಸ್ಪತ್ರೆ. ಮಾನ್ಯ ಸಂಜಯ್ ಗಾಂಧಿಯವರು ಸತ್ತ ಮೇಲೆ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬೆಂಗಳೂರಿನ ಸುತ್ತಮುತ್ತ ಸುಮಾರು 15-20 ಕಿ.ಮೀ. ವ್ಯಾಪ್ತಿಯಲ್ಲಿ ಏನಾದರೂ ಅಪಘಾತಗಳಾದರೆ ಅಪಘಾತಗಳಾದ 1 ಗಂಟೆಯವರೆಗೆ ಅದನ್ನು

ಗೋಲ್ಡನ್ ಅವರ್ ಎಂದು ಹೇಳುತ್ತಾರೆ . ಆ ಸಮಯದೊಳಗೆ ಅಪಘಾತಕ್ಕೊಳಗಾದ ವ್ಯಕ್ತಿಗೆ ಟ್ರೀಟಮೆಂಟ್‌ನ್ನು ಕೊಟ್ಟರೆ ಅವನನ್ನು ಬದುಕಿಸಬಹುದು, ಅಥಾವ ಅವನು ಹೆಚ್ಚು ಅಂಗವಿಕಲಾಗುವುದನ್ನು ಕಡಿಮೆ ಮಾಡಬಹುದು ಎಂಬ ಉದ್ದೇಶದಿಂದ ಈ ಸಂಜಯ್‌ಗಾಂಧಿ ಆಸ್ಪತ್ರೆಯನ್ನು ಪ್ರಾರಂಭ ಮಾಡಿದ್ದುದು. ಅದಾದನಂತರ ಮಾನ್ಯ ಗುಂಡೂರಾಯರು ಅದನ್ನು ಪ್ರಾರಂಭ ಮಾಡಿದರು, ಅನಂತರ ಅದು ನಿಂತುಹೋಯಿತು, ನಂತರ ನಾನು ಆರೋಗ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಅದಕ್ಕೆ ಒಂದು ಜೀವ ಬಂದಿತ್ತು . ಇತ್ತೀಚಿನ ದಿನಗಳಲ್ಲಿ ಈ ಸಂಜಯ್‌ಗಾಂಧಿ ಆಸ್ಪತ್ರೆ ಕೇವಲ ಒಂದು ರೀತಿಯ ಎಮರ್ಜೆನ್ಸಿ ವಾರ್ಡ್ ಆಗಿದೆಯೇ ಹೊರತು, ಆಸ್ಪತ್ರೆ ರೀತಿಯಲ್ಲಿಲ್ಲ. ಡಾಃ ಹೆಚ್.ಕೆ.ಶ್ರೀನಿವಾಸ ಮೂರ್ತಿಯವರು ನಮ್ಮ ಇಡೀ ರಾಷ್ಟ್ರದಲ್ಲೇ ಅತ್ಯಂತ ಒಳ್ಳೆಯ ಮೂಳೆ ತಜ್ಞರು. ಅವರು ಈ ಆಸ್ಪತ್ರೆಯ ಡೈರೆಕ್ಟರ್ ಆಗಿ ಬಹಳ ಉತ್ತಮ ಸೇವೆಯನ್ನು ಮಾಡಿದ್ದಾರೆ. ಅವರು ಒಂದು ಕಾನ್‌ಸೆಫ್ಟ್‌ನ್ನು ಇಟ್ಟುಕೊಂಡು, ಹೋಂ ಡಿಪಾರ್ಟ್‌ಮೆಂಟ್‌ನಿಂದ, ಟ್ರ್ಯಾನ್ಸ್‌ಪೋರ್ಟ್ ಡಿಪಾಟ್‌ಮೆಂಟ್‌ನಿಂದ ಹಾಗೂ ಇನ್ನಿತರೇ ಬೇರೆ ಬೇರೆ ಇಲಾಖೆಗಳಿಂದ ಸವಲತ್ತುಗಳನ್ನು ತೆಗೆದುಕೊಂಡು ಬೆಂಗಳೂರಿನ ಸುತ್ತಮುತ್ತ ಅಪಘಾತಗಳಾದರೆ ಅದನ್ನು 1 ಗಂಟೆಯೊಳಗೆ ಬೌರಿಂಗ್ ಆಸ್ಪತ್ರೆಗೆ ಇರಬಹುದು ವಿಕ್ಟೋರಿಯಾ ಆಸ್ಪತ್ರೆಗೆ ಇರಬಹುದು ಅಲ್ಲಿಗೆ ಪೇಷೆಂಟ್‌ಗಳನ್ನು ತೆಗೆದುಕೊಂಡು ಹೋಗದೆ ಇಲ್ಲಿಗೇ ತೆಗೆದುಕೊಂಡು ಬರಬೇಕೆಂದು ಹೇಳುವುದಾದರೆ, ನೀವು ಸಂಜಯ್ ಗಾಂಧಿ ಆಸ್ಪತ್ರೆಗೆ ಕೊಡುತ್ತಿರುವ ಹಣ ಏನೇನೂ ಸಾಲದು. ನಾವು ಯಾವ ಉದ್ದೇಶದಿಂದ ಈ ಆಸ್ಪತ್ರೆಯನ್ನು ಪ್ರಾರಂಭ ಮಾಡಿದೆವು ಆ ಉದ್ದೇಶ ಈಡೇರುತ್ತಿಲ್ಲ . ನಾನಾದರೂ ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಆ ಆಸ್ಪತ್ರೆಗೆ ಅವಶ್ಯಕವಾಗಿ ಬೇಕಾಗಿರುವ ಹಣವನ್ನು ತಾವು ಒದಗಿಸಬೇಕು, ಮತ್ತು 1980ರಲ್ಲಿ ಗುಂಡೂರಾಯರು ಯಾವ ಉದ್ದೇಶದಿಂದ ಪ್ರಾರಂಭ ಮಾಡಿದರು ಆ ಉದ್ದೇಶವನ್ನು ಈಡೇರಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ ಅದು ಬೌರಿಂಗ್ ಅಥವಾ ವಿಕ್ಟೋರಿಯಾ ಆಸ್ಪತ್ರೆಯಂತೆ ಜನರಲ್ ಆಸ್ಪತ್ರೆ ಆದಂತಾಗುತ್ತದೆ. ಈ ಆಸ್ಪತ್ರೆಯನ್ನು ಉತ್ತಮ ಸ್ಥಿತಿಗೆ ತರಬೇಕಾದರೆ ನೀವು ಅದಕ್ಕೆ ಬೇಕಾದ ಹಣವನ್ನು ಒದಗಿಸಬೇಕು. ಈಗ ನೀವು ಕೊಡುತ್ತಿರುವ ಹಣ ಕೇವಲ ಅಲ್ಲಿನ ಸಿಬ್ಬಂದಿವರ್ಗದ ವೇತನಕ್ಕೆ ಸರಿಹೋಗುತ್ತಿದೆಯೇ ಹೊರತು ಬೇರೆ ಯಾವುದೇ ಕೆಲಸಕ್ಕೂ ಹಣ ಸಾಕಾಗುತ್ತಿಲ್ಲ. ಈ ವಿಚಾರವನ್ನು ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ. ಅಲ್ಲಿನ ಪರಿಸ್ಥಿತಿ ಬಹಳ ಧಾರುಣವಾಗಿದೆ . ನಾನು ಯಾರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿನ ವ್ಯವಸ್ಥೆ ಸರಿಹೋಗಬೇಕಾದರೆ ಅಲ್ಲಿಗೇಬೇಕಾದ ಉಪಕರಣಗಳನ್ನು ಕೊಡಬೇಕಾಗುತ್ತದೆ, ಹೆಚ್ಚಿಗೆ ಹಣವನ್ನು ಕೊಡಬೇಕಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸಂಜಯ್ ಗಾಂಧಿ ಆಸ್ಪತ್ರೆಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಚಾರ ಎಂದರೆ, ಸ್ವಾಯತ್ತ ಸಂಸ್ಥೆಯಾದಂಥ ಕಿಡ್ವಾಯ್ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಒಂಕಾಲಜಿ ಇದು ನಮ್ಮ ಇಡೀ ರಾಷ್ಟ್ರದಲ್ಲೇ ಅತ್ಯಂತ ಉತ್ತಮವಾದ ಕ್ಯಾನ್ಸರ್ ಆಸ್ಪತ್ರೆ. ಇದು ಒಳ್ಳೆಯ ಸೇವೆಯನ್ನು ಸಲ್ಲಿಸುತ್ತಿದೆ. ಸಾಮಾನ್ಯವಾಗಿ ಕ್ಯಾನ್ಸರ್ ಬಂದವರು ಬದುಕುವುದು ಬಹಳ ಕಷ್ಟ. ಈ ಕ್ಯಾನ್ಸರ್ ಕಾಯಿಲೆಯನ್ನು ಪ್ರಾರಂಭದಲ್ಲೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ

ರೋಗಿ ಇನ್ನೂ ಸ್ವಲ್ಪ ಹೆಚ್ಚುಕಾಲ ಬದುಕುವುದಕ್ಕೆ ಅವಕಾಶಮಾಡಿಕೊಡಬಹುದೆಂಬ ನಂಬಿಕೆ ಇದೆ. ಹುಬ್ಬಳ್ಳಿ, ಬಳ್ಳಾರಿ, ದಾವಣಗೆರೆ, ಮೈಸೂರುಗಳಲ್ಲಿ ಇರುವಂಥಹ ಆಸ್ಪತ್ರೆಗಳಲ್ಲಿ ಈ ಕ್ಯಾನ್ಸರ್ ಆಸ್ಪತ್ರೆಯ ಶಾಖೆಗಳನ್ನು ತೆಗೆದು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲೂ ಇದಕ್ಕೆ ಒಂದು ವಿಂಗ್‌ನ್ನು ಕ್ಯಾನ್ಸರ್ ಪತ್ತೆಮಾಡುವುದಕ್ಕೆ ಮತ್ತು ಕ್ಯಾನ್ಸರ್ ಚಿಕಿತ್ಸೆ ಮಾಡುವುದಕ್ಕೆ ಅಟ್ಯಾಚ್‌ಮಾಡಬೇಕೆಂದು ಒಂದು ಬೋರ್ಡ್‌ನ್ನೂ ಕೂಡ ನಾವು ಮಾಡಿದೆವು. ಆ ಕ್ಯಾನ್ಸರ್ ಪ್ರಿವೆನ್‌ಷನ್ ಬೋರ್ಡ್ ಇವತ್ತು ಯಾವುದೇ ಕೆಲಸವನ್ನೂ ಮಾಡುತ್ತಿಲ್ಲವೆಂದು ಹೇಳಿದರೂ ಕೂಡ ತಪ್ಪಾಗುವುದಿಲ್ಲ. ಅಷ್ಟೇ ಅಲ್ಲ ಈ ಕಾರ್ಯಕ್ರಮವನ್ನೇ ಸಂಪೂರ್ಣವಾಗಿ ನಿಲ್ಲಿಸಿದ್ದಾರೆಂದು ಹೇಳಿದರೂ ಕೂಡ ತಪ್ಪಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ಹೆಚ್ಚು ನಿಗಾಕೊಡಬೇಕು. ಇವತ್ತು ನೀವು ಕೊಡುತ್ತಿರುವ ಹಣ ಅದಕ್ಕೆ ಏನೇನೂ ಸಾಕಾಗುತ್ತಿಲ್ಲ. ಒಂದು ಮಾತನ್ನು ಹೇಳುವುದಾದರೆ ಬೆಂಗಳೂರಿನ ಸುತ್ತ ಮುತ್ತ ಇರತಕ್ಕ ಜನರು ಇಲ್ಲಿ ಬಂದು ಚಿಕಿತ್ಸೆಯನ್ನು ಪಡೆದುಕೊಂಡು ಹೊರಟುಹೋಗುತ್ತಾರೆ. ಆದರೆ ಅದೇ ಗುಲ್ಬರ್ಗಾದಲ್ಲಿರುವವರು, ಹೈದರಾಬಾದ್ ಕರ್ನಾಟಕದ ಜನರು, ಮುಂಬಯಿ ಕರ್ನಾಟಕದ ಜನರಿಗೆ ಈ ಆಸ್ಪತ್ರೆಯ ಸೌಲಭ್ಯ ಸಿಕ್ಕುವುದಿಲ್ಲ. ಆದ್ದರಿಂದ ಆ ಭಾಗದ ಆಸ್ಪತ್ರೆಗಳಲ್ಲಿರತಕ್ಕ ವೈದ್ಯರನ್ನು ಕರೆಯಿಸಿಕೊಂಡು ಅವರಿಗೆ ಉತ್ತಮ ಟ್ರೈನಿಂಗ್‌ಕೊಟ್ಟು ಅನಂತರ ಅಲ್ಲಿ ಆ ವಿಭಾಗಗಳನ್ನು ತೆರೆದು ಹುಬ್ಬಳ್ಳಿ, ಗುಲ್ಬರ್ಗಾದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೆಚ್ಚು ಹಣವನ್ನು ಕೊಟ್ಟರೆ ಆ ಭಾಗದ ಜನರಿಗೆ ಬಹಳ ಉಪಕಾರವಾಗುತ್ತದೆ. ತಾವು ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಮತ್ತೊಂದು ವಿಚಾರ ಎಂದರೆ, ಪೋಸ್ಟ್ ಗ್ರ್ಯಾಜುಯೇಶನ್ ಸೀಟುಗಳನ್ನು ಅಲಾಟ್ ಮಾಡುವ ವಿಚಾರದಲ್ಲಿ ಕಳೆದ ವರ್ಷ ಸರ್ಕಾರ ಯಾವುದೇ ಒಂದು ನಿರ್ದಿಷ್ಟ, ಖಚಿತ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ . ಇದರ ಬಗ್ಗೆ ಸರ್ಕಾರದ ವತಿಯಿಂದ ಒಂದುನಿರ್ದಿಷ್ಟ ಹಾಗೂ ಖಚಿತ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ. ಸಮ್ಮನೆ ಒಂದು ಹಾರಿಕೆ ಉತ್ತರ ಕೊಟ್ಟು, ಇಲ್ಲಿ 400 ಸೀಟುಗಳಿದ್ದವು, ಅದರಲ್ಲಿ ನಾವು 150 ಸೀಟುಗಳನ್ನು ತೆಗೆದುಕೊಂಡಿದ್ದೇವೆ, ಅವರು 250 ಸೀಟುಗಳನ್ನು ತೆಗೆದುಕೊಂಡಿದ್ದಾರೆಂದು ಹೇಳುವುದರಿಂದ ಯಾವುದೇ ಉಪಯೋಗವಾಗುವುದಿಲ್ಲ. ಪಿ.ಜಿ.ಕೋರ್ಸ್‌ನಲ್ಲಿ ಮುಖ್ಯವಾದ ಸೀಟುಗಳು ಯಾವುದು? ಇದು ಮಾನ್ಯ ಯಾಹ್ಯಾರವರಿಗೆ ಗೊತ್ತಿದೆ. ಮಾನ್ಯ ನಂಜುಂಡಪ್ಪನವರು 83-84ರಲ್ಲಿ ಧಾರಡವಾಡ ಯೂನಿವರ್ಸಿಟ್ಟಿಯಲ್ಲಿ ವೈಸ್ ಛಾನ್ಸಲರ್ ಆಗಿದ್ದರು. ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದೆವು. ಕಾರಣ ಕ್ಯಾಪಿಟೇಷನ್ ಶುಲ್ಕವನ್ನು ಕಡಿಮೆ ಮಾಡಬೇಕು, ಇಲ್ಲವೇ ಬ್ಯಾನ್ ಮಾಡಬೇಕೆಂಬ ಉದ್ದೇಶದಿಂದ. ಆ ಸಮಿತಿಯವರು ತಮ್ಮ ವರದಿಯಲ್ಲಿ ಇನ್ನು 5 ವರ್ಷದಲ್ಲಿ ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕೆಂದು ಶಿಫಾರಸ್ಸು ಮಾಡಿತು. ಇದಕ್ಕೆ ಸಂಬಂಧಪಟ್ಟಂತೆ ನಾವು ಈ ಒಂದು ಕಾನೂನನ್ನೂ ಕೂಡ ಮಾಡಿದೆವು. ಕ್ಯಾಪಿಟೇಷನ್ ತೆಗೆದುಕೊಳ್ಳಬಾರದೆಂದು ನಮ್ಮ ಕಾಲದಲ್ಲೇ ಪ್ರಾರಂಭವಾಯಿತು. ಆದರೆ ಅದು ಕ್ಯಾಪಿಟೇಷನ್ನೂ ಆಯಿತು, ಅದರ ಜೊತೆಗೆ ಸೈಡ್ ಮನಿಯೂ ಆಯಿತು, ಇವತ್ತು ಹೈಕೊರ್ಟ್ ಅಥವಾ ಸುಪ್ರಿಂ ಕೋರ್ಟ್‌ಗಳ ಜಡ್ಜ್‌ಮೆಂಟ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಡಾಃ ಎ..ಬಿ.ಮಲಕರೆಡ್ಡಿ (ಮಾನ್ಯ ಆರೋಗ್ಯ ಸಚಿವರು ) ಃ 83ನೇ ಇಸವಿಯಲ್ಲಿ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಡಾಃ ರಾಜ್ ಕಮಿಟಿ ಎಂದು ನೇಮಕಾತಿ ಮಾಡಿದಿರಿ, ಹಾಗೆ ಮಾಡಿದ್ದರ ಉದ್ದೇಶ ಕ್ಯಾಪಿಟೆಷನ್ ಶುಲ್ಕವನ್ನು ಅಬಾಲಿಷ್ ಮಾಡುವ ಸಲುವಾಗಿ ಆಗ ನಿಮ್ಮ ಸರ್ಕಾರ ಇತ್ತು. ಆ ಸಮಿತಿಯವರು ರಾಜ್ಯಪಾಲರಿಗೆ ಒಂದು ವರದಿಯನ್ನೂ ಸಲ್ಲಿಸಿದರು. ಅದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿರಿ, ಕ್ಯಾಪಿಟೇಷನ್ ಪೀಸನ್ನು ಅಬಾಲಿಷ್ ಮಾಡಿದಿರಾ ? ದಯವಿಟ್ಟು ಹೇಳುತ್ತಿರಾ?

ಶ್ರೀ ಪಿ.ಜಿ.ಆರ್.ಸಿಂಧ್ಯ :- ನಾವು ಏನು ಕಾನೂನನ್ನು ಮಾಡಿದ್ದೆವು ಆ ಕಾನೂನನ್ನು ಕಾರ್ಯಚರಣೆ ಮಾಡುವುದರಲ್ಲಿ ನಾವು ವಿಫಲರಾಗಿದ್ದೇವೆ ಎಂಬ ಮಾತನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಕ್ಯಾಪಿಟೇಷನ್ ಕಾಲೇಜುಗಳನ್ನು ನಡೆಸುವವರು ಆ ಕಡೆಯೂ ಇದ್ದಾರೆ, ಈ ಕಡೆಯೂ ಇದ್ದಾರೆ. ಆದ್ದರಿಂದ ವೈಯಕ್ತಿಕವಾಗಿ ಯಾರ ಬಗ್ಗೆಯೂ ದೋಷಾರೋಪಣೆ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ಆದರೆ ವ್ಯವಸ್ಥೆ ಬಗ್ಗೆ ನಾನು ಹೇಳುತ್ತಿದ್ದೇನೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂತು. ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ ಸರ್ಕಾರಕ್ಕೆ. ನಾನು ಸಲಹೆ ಕೊಡಬೇಕು ಎಂಬ ಉದ್ದೇಶದಿಂದಲೇ ಪೂರ್ವಭಾವಿಯಾಗಿ ಪೀಠಿಕೆ ರೂಪದಲ್ಲಿ ಇದನ್ನು ಹೇಳುತ್ತಿದ್ದೇನೆ ಮಾನ್ಯ ಅದ್ಯಕ್ಷರೇ ಎನ್.ಅರ್.ಐ. ಮೆಡಿಕಲ್ ಸೀಟುಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ನಿಮಗೆ ಗೊತ್ತಿರಬಹುದು ಇಂಡಿಯನ್ಸ್‌ಗೆ ಕೊಡುತ್ತಾರೆ. ಎಷ್ಟು ಎಂದರೆ 30 ಲಕ್ಷ ರೂಪಾಯಿ. 30 ಲಕ್ಷ ರೂಪಾಯಿ ಕೊಟ್ಟರೆ ಎಂ.ಬಿ.ಬಿ.ಎಸ್ ಸೀಟು ಸಿಗುತ್ತದೆ. ಇದು ಒಂದು ಕಡೆ ಆಯಿತು. ಇದು ಹೋಗಲಿ. ಈಗ ಎನ್.ಆರ್.ಐ. ಸೀಟುಗಳು ಎಂದು ಸುಪ್ರೀಂ ಕೋರ್ಟಿನವರು ಮಾಡಿದ್ದಾರೆ, ಅದು ಎಲ್ಲರಿಗೂ ಅನುಕೂಲವಾಗಿದೆ, ಅದರ ಪ್ರಕಾರ ನಡೆದುಕೊಂಡು ಹೋಗುತ್ತದೆ. ಪೋಸ್ಟ್ ಗ್ರಾಜುಯೇಷನ್ ಸೀಟ್, ಹೇಗಿದೆ ಎಂದರೆ ನೀವು ಯಾರಾದರೂ ಹೋಗಿ ಅವರಿಗೆ ಎನ್‌ಕ್ವೈರಿ ಮಾಡುತ್ತೇವೆಂದರೆ ನಿಮಗೆ ಬಯೋ ಕೆಮಿಸ್ಟ್ರಿಯಲ್ಲೋ ಅಥವಾ ಕೆಲಸಕ್ಕೆ ಬಾರದಂಥ ಕೆಲವು ಸಬ್ಜೆಕ್ಟ್‌ಗಳಿವೆ ಫಿಸಿಕಲ್ ಮೆಡಿಸನ್ ಎಂದು ಇಂಥ ಸಬ್ಜೆಕ್ಟ್‌ಗಳಲ್ಲಿ ಎಷ್ಟು ಬೇಕಾದರೂ ಸೀಟುಗಳನ್ನು ಸರ್ಕಾರಕ್ಕೆ ಕೊಡುತ್ತೇವೆಂದು ಹೇಳುತ್ತಾರೆ. ನಾವು ಮಾಡಿಕೊಂಡಿರುವುದು ಏನೆಂದರೆ ಶೇಕಡ 50 ಭಾಗ ಆಡಳಿತಮಂಡಳಿಯವರಿಗೆ ಕೊಡಬೇಕು ಶೇಕಡ 50ಭಾಗ ಸರ್ಕಾರ ತೆಗೆದುಕೊಳ್ಳಬೇಕು ಎಂದು. ಆದರೆ ಯಾವುದನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ? ಸರ್ಕಾರಕ್ಕೆ ಅಥವಾ ಮೆರಿಟ್ ಬಾಯ್ಸ್‌ಗೆ ಕೊಡುತ್ತಾ ಇರುವುದು ಯೂಸ್‌ಲೆಸ್ ಸಬ್ಜೆಕ್ಟಗಳು. ಎಂ.ಎಸ್. ಜನರಲ್ ಸರ್ಜರಿಯನ್ನು ಪ್ರೈವೇಟ್ ಇನ್ಸ್ಟಿಟ್ಯೂಷನ್‌ನವರು ಇಟ್ಟುಕೊಳ್ಳುತ್ತಾರೆ. ಎಂ.ಎಸ್.ಆರ್ಥೊಪಿಡಿಕ್ಸ್‌ನ್ನು ಅವರು ಇಟ್ಟುಕೊಳ್ಳುತ್ತಾರೆ. ಅದಾದನಂತರ ಡೆರ್ಮಟಾಲಜಿಯನ್ನು ಅವರಿಟ್ಟುಕೊಳ್ಳುತ್ತಾರೆ. ಆದರೆ ಕೆಲಸಕ್ಕೆ ಬಾರದ ರೇಡಿಯಾಲಜಿ ಇರಬಹುದು ಮತ್ತೊಂದಿರಬಹುದು ಅದನ್ನು ಸರ್ಕಾರದವರು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಯಾವರೀತಿ ತಮಗೆ , ಸರ್ಕಾರಕ್ಕೆ ಅಥವಾ ಮೆರಿಟೆಡ್ ಬಾಯ್ಸ್‌ಗೆ ಅಥವಾ ಇನ್‌ಸರ್ವೀಸ್ ಡಾಕ್ಟರ್ಸ್ ಇದ್ದಾರೆ. ಇವರಿಗೆ ಬಹಳ ಅನ್ಯಾಯವಾಗುತ್ತಿದೆ. ಮಲಕರೆಡ್ಡಿಯವರು ಹೇಳಬಹುದು, ಇದಕ್ಕೆ ನೀವೂ ಜವಾಬ್ದಾರರು, ನೀವು 5 ವರ್ಷ ಸರ್ಕಾರ ನಡೆಸಿದ್ದೀರಿ, ಆದ್ದರಿಂದ ವಿಫಲರಾಗಿರುವುದಕ್ಕೆ ನೀವೂ ಕಾರಣರು ಎಂದು

ಹೇಳಬಹುದು. ನಾವು ವಿಫರಾಗಿದ್ದಕ್ಕೇ ಈ ಕಡೆ 22 ಜನ ಬಂದು ಇಲ್ಲಿ ಕುಳಿತಿರುವುದು. ನೀವು ನಾಲ್ಕು ವರ್ಷ ಆಗಿ ಏನೂ ಮಾಡಲಿಲ್ಲವಲ್ಲಾ. ಆ ವರ್ಷದ ಪೋಸ್ಟ್‌ಗ್ರಾಜುಯೇಷನ್ ಸೀಟಿನಲ್ಲಿ 400-500 ಸೀಟುಗಳಿವೆ. ಅದನ್ನು ಹಂಚುವ ಬಗ್ಗೆ ಸರ್ಕಾರ ನೀತಿನಿರೂಪಣೆಯನ್ನು ಇದುವರೆಗೂ ಏತಕ್ಕೆ ಮಾಡಲಿಲ್ಲ ? ಏತಕ್ಕೆ ಫೈನಲೈಸ್ ಮಾಡಲಿಲ್ಲ? ಇದನ್ನು ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಈ ಪೋಸ್ಟ್‌ಗ್ರಾಜುಯೆಷನ್ ಸೀಟುಗಳು ಏನಿವೆ. ಅದನ್ನು ಹೆಚ್ಚು ಮಾಡಬೇಕು. ನಾನು ಏನು ಹೇಳುತ್ತಿದ್ದೇನೆ ಎಂದರೆ 10,15,20 ಪರ್ಸೆಂಟ್ ಮೆರಿಟೆಡ್ ಬಾಯ್ಸ್‌ಗೆ ಇಡಿ. ಆದರೆ ಇನ್‌ಸರ್ವೀಸ್ ಡಾಕ್ಟರ್ಸ್‌ಗೆ ನೀವು ಮಾಡಿರತಕ್ಕ ಒಂದು ಕ್ರಮವನ್ನು ನಾನು ಅಪ್ರಿಷಿಯೇಟ್ ಮಾಡುತ್ತೇನೆ . ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏನೆಂದರೆ ಈ ಅಸಿಸ್ಟೆಂಟ್ ಸರ್ಜನ್ಸ್ ಯಾರಿದ್ದಾರೆ ಅವರು ಒಂದು ಸಾರಿ ಕೆಲಸಕ್ಕೆ ಸೇರಿದಮೇಲೆ ಪ್ರೊಮೋಷನಲ್ ಅಪೊರ್ಚುನಿಟೀಸ್ ಅವರಿಗೆ ಇರುತ್ತಿರಲಿಲ್ಲ. ಅವರಿಗೆ ಸೀನಿಯರ್ ಸರ್ಜನ್, ಸೀನಿಯರ್ ಡಾಕ್ಟರ್ಸ್ ಎಂದು ಪೊಮೋಷನ್ ಕೊಟ್ಟು ಮಾಡುವುದನ್ನು ಕಳೆದ ಒಂದು ವರ್ಷದಲ್ಲಿ ಪ್ರಯತ್ನ ಮಾಡಿ ಡಾಃ ಮಲಕರೆಡ್ಡಿಯವರು ಮತ್ತು ಮುಖ್ಯ ಮಂತ್ರಿಗಳು ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಿಮಗೆ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತಿಲ್ಲ. ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಕೊನೇಪಕ್ಷ ಮಾಡಿದ್ದೀರಿ. ಅಷ್ಟುಮಟ್ಟಿಗೆ ನಿಮಗೆ ಅ ಕೆಡಿಟ್ ಕೊಡುತ್ತೇನೆ. ಅದರೆ ಅದೇ ಡಾಕ್ಟರ್ಸ್‌ಗೆ ಸ್ಪೆಷಲೈಸೇಷನ್ ಬಗ್ಗೆ ಟ್ರೈನಿಂಗ್ ಕೊಡಬೇಕಾದರೆ ಪೋಸ್ಟ್ ಗ್ರಾಜುಯೆಷನ್ ಸೀಟುಗಳನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಆ ಕಡೆ ನೀವು ಪ್ರಯತ್ನವನ್ನು ಮಾಡಬೇಕು.

ಡಾಃ ಎ.ಬಿ.ಮಲಕರೆಡ್ಡಿ (ಆರೋಗ್ಯ ಸಚಿವರು) ಪೋಸ್ಟ್‌ಗ್ರಾಜುಯೇಷನ್ ಅಡ್ಮಿಷನ್ 1970ರ ದಶಕದಲ್ಲಿ ರಿವರ್ಸ್ ಇತ್ತು . ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೆ ಬಹಳ ಪ್ರಮಾಣದಲ್ಲಿ ಅಂದರೆ 75 ಪರ್ಸೆಂಟ್ ಕೊಡುತ್ತಿದ್ದರು. ಓಪನ್ ಮೆರಿಟ್‌ಗೆ 25 ಪರ್ಸೆಂಟ್ ಇತ್ತು. ಸರ್ಕಾರಿ ಸೇವೆಯಲ್ಲಿ ಪೋಸ್ಟ್ ಗ್ರಾಜುಯೇಷನ್ ಸೀಟು ತುಂಬತಕ್ಕ ಡಾಕ್ಟರ್ಸ್ ಇದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಾರೆ. ಆಗ ಪುನಃ ಅದನ್ನು ರಿವರ್ಸ್ ಮಾಡಿದೆವು. ಒಪನ್ ಮೆರಿಟ್ 75 ಪರ್ಸೆಂಟ್, ಇನ್‌ಸರ್ವೀಸ್ 25 ಪರ್ಸೆಂಟ್ ಎಂದು ಮಾಡಿದೆವು. ಆದರೆ ಒಂದು ವಿಷಯ. ಸರ್ಕಾರಿ ಸೇವೆಯಲ್ಲಿ ಕೆಲಸ ಮಾಡುವವರಿಗೆ ಪೋಸ್ಟ್ ಗಾಜುಯೇಷನ್ ಸೀಟುಗಳನ್ನು ವಿಶೇಷವಾಗಿ ಕೊಟ್ಟರೆ ಎಲ್ಲಾ ಡಾಕ್ಟರುಗಳೂ ನಾನು ಸ್ಪೆಷಲಿಸ್ಟ್ ಇದ್ದೇನೆ ಎಂದು ಹೇಳುತ್ತಾರೆ. ಅವರೆಲ್ಲಾ ಸಿಟಿಗಳಲ್ಲಿ, ಮೇಜರ್ ಆಸ್ಪತ್ರೆಗಳಲ್ಲಿ ಟೀಚಿಂಗ್ ಹಾಸ್ಪಿಟಲ್‌ಗಳಲ್ಲಿ ಮತ್ತು ಡಿಸ್ಟ್ರಿಕ್ಟ್ ಹಾಸ್ಪಿಟಲ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ತಾಲ್ಲೂಕುಗಳಲ್ಲಿ ಕೆಲಸ ಮಾಡುವುದಕ್ಕೆ ಸ್ಪೆಷಲಿಸ್ಟ್ ಡಾಕ್ಟರುಗಳು ಯಾರೂ ತಯಾರಿಲ್ಲ. ಹಳ್ಳಿಯ ಕಡೆಯಂತೂ ಯಾರೂ ಹೋಗುವುದಿಲ್ಲ. ಅದಕ್ಕಾಗಿ ಈಗ ಪರಿಸ್ಥಿತಿ ವಿಪರೀತವಾಗಿದೆ. ಏನು ಪ್ರಮಾಣ ಈಗ ಇದೆ ಇದು ಬಹಳ ಸರಿ ಇದೆ. ಓಪನ್ ಮೆರಿಟ್ 75 ಪರ್ಸೆಂಟ್ ಇನ್‌ಸರ್ವೀಸ್ 25 ಪರ್ಸೆಂಟ್ ಇರುವುದು ಸಾಕಷ್ಟು ಪ್ರಮಾಣವಾಗಿದೆ. ಹೆಚ್ಚು ಮಾಡುವುದು ಬೇಕಾಗಿಲ್ಲ.

ಶ್ರೀ ಪಿ.ಜೆ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಲಕರೆಡ್ಡಿಯವರು ಸ್ವತಃ ವೈದ್ಯರಿದ್ದಾರೆ. ಮತ್ತು ವೈದ್ಯಮಿತ್ರರುಗಳು ಎಲ್ಲಿ ಕೆಲಸ ಮಾಡುತ್ತಾರೆ, ಎಲ್ಲಿ ಕೆಲಸ ಮಾಡುವುದಿಲ್ಲ ಎಂಬ ಬಗ್ಗೆ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಅದರ ಬಗ್ಗೆ ನಾನೇನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾತನಾಡಿದರೆ ಆ ವೃತ್ತಿಯಲ್ಲಿರುವವರಿಗೆ ಬೇಸರವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನನ್ನ ಮಾತನ್ನು ನಾಳೆ ಮುಂದುವರೆಸುತ್ತೇನೆ.

ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 1993

ಶ್ರೀ ಸಿ.ಆರ್. ಸಗೀರ್‌ಅಹ್ಮದ್ : (ನಗರಾಡಳಿತ ಸಚಿವರು) ಮಾನ್ಯ ಉಪಾಧ್ಯಕ್ಷರೇ ಕರ್ನಾಟಕ ಪೌರ ನಿಗಮಗಳ(ತಿದ್ದುಪಡಿ) ವಿಧೇಯಕ 1993 ವಿಧೇಯಕದ ಸಂಖ್ಯೆ 18 ಮತ್ತು 33ನ್ನು ಹಿಂದಕ್ಕೆ ಪಡೆಯಲು ಸಭೆಯ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು ಪ್ರಸ್ತಾವ ಏನೆಂದರೆ : 1993ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಈ ಸಭೆಯು ಅನುಮತಿಯನ್ನು ಸೂಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಹಿಂದೆಕ್ಕೆ ಪಡೆಯಲು ಅನುಮತಿ ನೀಡಲಾಯಿತು.

ಈಗ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ನಾಳೆ ಮತ್ತೆ 11ಗಂಟೆಗೆ ಸಭೆ ಸೇರುವುದು.

ಸದನವು 5ಗಂಟೆ 51 ನಿಮಿಷಗಳಿಗೆ ಮುಕ್ತಾಯವಾಗಿ ನಾಳೆ ಬೆಳಿಗ್ಗೆ11ಗಂಟೆಗೆ ಸಭೆ ಸೇರಲು ನಿಶ್ಚಯಿಸಲಾಯಿತು.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)